ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 87 RNI Number : KNKAN/25/A2770 06-04-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :87 ರಾಯಚೂರು 06-04-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಹಿಮಂತ ಬಿಸ್ವಾ ಶರ್ಮಾ ದೇಶದ ಅತ್ಯಂತ ಭ್ರಷ್ಟ ಸಿಎಂ: ರಾಹುಲ್ ಗಾಂಧಿ ವಾಗ್ದಾಳಿ

ಬಿಸ್ವಾನಾಥ್(ಅಸ್ಸಾಂ)-

ಹಿಮಂತ ಬಿಸ್ವಾ ಶರ್ಮಾ ಅವರು ವಿಭಜನೆ ಮತ್ತು ಭ್ರಷ್ಟಾಚಾರದಲ್ಲಿ ನಿರತರಾಗಿದ್ದಾರೆ. ಶರ್ಮಾ ಅವರ ಅಸಂಬದ್ಧ ಹೇಳಿಕೆಗಳು ಅವರ ವೈಫಲ್ಯಗಳಿಂದ ಗಮನ ಬೇರೆಡೆ ಸೆಳೆಯುವ ಉದ್ದೇಶ ಹೊಂದಿವೆ. ಅವರೊಬ್ಬ ದೇಶದ ಅತ್ಯಂತ ಭ್ರಷ್ಟ ಮುಖ್ಯಮಂತ್ರಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತೀವ್ರ ವಾಗ್ದಾಳಿ ನಡೆಸಿದರು.

ರಾಹುಲ್ ಗಾಂಧಿ ಇಂದು ರಾಜ್ಯದ ಬಿಸ್ವಾನಾಥ್ ಮತ್ತು ಗೋಲಾಘಾಟ್ ಜಿಲ್ಲೆಯಲ್ಲಿ ಬೃಹತ್ ಸಾರ್ವಜನಿಕ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದರು.

ಸಂಗೀತ ಮಾಂತ್ರಿಕ ಜುಬೀನ್ ಗಾರ್ಗ್ ಅವರ ಮರಣಕ್ಕೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದ ರಾಹುಲ್, ಮಹಿಳೆಯರಿಗೆ ಮಾಸಿಕ ಭತ್ಯೆ, ಉದ್ಯಮಿ ಮಹಿಳೆಯರಿಗೆ 50 ಸಾವಿರ ನಗದು, 25 ಲಕ್ಷ ರೂ ಮೌಲ್ಯದ ಆರೋಗ್ಯ ವಿಮೆ ಮತ್ತು ಅಸ್ಸಾಂನ ನಿರಾಶ್ರಿತರಿಗೆ ಭೂಮಿ ಹಕ್ಕು ಸೇರಿದಂತೆ ಕೆಲವು ಚುನಾವಣಾ ಭರವಸೆಗಳನ್ನು ನೀಡಿದರು.

ನಿಮ್ಮ ಮುಖ್ಯಮಂತ್ರಿ ದಿನದ 24 ಗಂಟೆಯೂ ಅಸಂಬದ್ಧ ಮಾತುಗಳನ್ನಾಡುತ್ತಲೇ ಇರುತ್ತಾರೆ. ಜುಬೀನ್ ಗರ್ಗ್ ತಮ್ಮ ಇಡೀ ಜೀವನವನ್ನು ಅಸ್ಸಾಂಗೆ ಮುಡಿಪಾಗಿಟ್ಟಿದ್ದಾರೆ. ಅವರು ಯಾರೊಂದಿಗೂ ಅಸಭ್ಯವಾಗಿ ವರ್ತಿಸಿಲ್ಲ. ನಿಮ್ಮ ಪ್ರಮುಖ ನಾಯಕರು ಅಸ್ಸಾಂ ಅನ್ನು ವಿಭಜಿಸಲು ಎಂದಿಗೂ ಪ್ರಯತ್ನಿಸಲಿಲ್ಲ. ಅವರು ಎಂದಿಗೂ ದ್ವೇಷ ಹರಡಲು ಪ್ರಯತ್ನಿಸಲಿಲ್ಲ. ಆದಾಗ್ಯೂ, ನಿಮ್ಮ ಮುಖ್ಯಮಂತ್ರಿ ನಿರಂತರವಾಗಿ ರಾಜ್ಯವನ್ನು ವಿಭಜಿಸಲು ಮತ್ತು ದ್ವೇಷವನ್ನು ಹರಡಲು ಪ್ರಯತ್ನಿಸುತ್ತಾರೆ. ಕಾಂಗ್ರೆಸ್ ಪಕ್ಷದ ಸಿಂಹಗಳು ಅವರನ್ನು ಕಂಬಿ ಹಿಂದೆ ಹಾಕುತ್ತಾರೆ ಎಂದು ಅವರಿಗೆ ತಿಳಿದಿದೆ ಎಂದರು.

ಮುಖ್ಯಮಂತ್ರಿ ಶರ್ಮಾ ಅಂತಿಮವಾಗಿ ಕ್ಷಮೆ ಯಾಚಿಸಬೇಕಾಗುತ್ತದೆ ಮತ್ತು ಅಸ್ಸಾಂನ ಜನರು ಮತ್ತು ಕಾಂಗ್ರೆಸ್ ನಾಯಕರಿಗೆ ಕ್ಷಮೆ ಯಾಚಿಸಬೇಕು. ಸಮಯ ಬಂದಾಗ ಅವರನ್ನು ಬಿಡುವುದಿಲ್ಲ. ರಾಜ್ಯ ನಾಯಕತ್ವವು ಅಸ್ಸಾಂನ ಜನರಿಗಿಂತ ಆಯ್ದ ಕಾರ್ಪೊರೇಟ್



ಗುಂಪುಗಳ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಿದೆ ಎಂದ ಅವರು, ಅಸ್ಸಾಂನ ಸಂಪನ್ಮೂಲಗಳನ್ನು ಬೆಂಬಲಕ್ಕಾಗಿ ಕೈಗಾರಿಕೋದ್ಯಮಿಗಳಿಗೆ ಹಸ್ತಾಂತರಿಸಲಾಗುತ್ತಿದೆ ಎಂದು ಆರೋಪಿಸಿದರು.

ದೆಹಲಿಯಲ್ಲಿರುವ ಅವರ ವ್ಯವಹಾರ ಪಾಲುದಾರರಾದ ಅಮಿತ್ ಶಾ ಮತ್ತು ನರೇಂದ್ರ ಮೋದಿ ನಿಮ್ಮನ್ನು ತಮ್ಮ ವೈಯಕ್ತಿಕ ಎಟಿಎಂ ಆಗಿ ಪರಿವರ್ತಿಸಿಕೊಂಡಿದ್ದಾರೆ. ನಿಮ್ಮ ಭೂಮಿಯನ್ನು ಅಂಬಾನಿ, ಅದಾನಿ ಮತ್ತು ಬಾಬಾ ರಾಮದೇವ್‌ಗೆ ಹಸ್ತಾಂತರಿಸಲಾಗಿದೆ. ಅವರು ಈ ಭೂಮಿಯನ್ನು ಉಚಿತವಾಗಿ ನೀಡುವುದಿಲ್ಲ, ಬದಲಾಗಿ, ಈ ವ್ಯಕ್ತಿಗಳು ಅವರಿಗೆ ತಮ್ಮ ಬೆಂಬಲ ನೀಡುತ್ತಾರೆ ಎಂದು ದೂರಿದರು.

ನಾವು ಅಸ್ಸಾಂನಲ್ಲಿ ಸರ್ಕಾರ ರಚಿಸಿದ ತಕ್ಷಣ, ಆರು ಯೋಜನೆಗಳನ್ನು ನಾವು ಜಾರಿಗೆ ತರುತ್ತೇವೆ. ಪ್ರತಿಯೊಬ್ಬ ಮಹಿಳೆಯೂ ಯಾವುದೇ ಷರತ್ತುಗಳಿಲ್ಲದೆ ತನ್ನ ಬ್ಯಾಂಕ್ ಖಾತೆಗೆ ಮಾಸಿಕ ನಗದು ವರ್ಗಾವಣೆಯಾಗಲಿದೆ ಮತ್ತು ವ್ಯವಹಾರವನ್ನು ಪ್ರಾರಂಭಿಸಲು ಬಯಸುವವರಿಗೆ 50 ಸಾವಿರ ರೂ.ಗಳನ್ನು ನೀಡಲಾಗುತ್ತದೆ. 100 ದಿನಗಳಲ್ಲಿ, ಜುಬೀನ್ ಗರ್ಗ್ ಪ್ರಕರಣದ ಆರೋಪಿಗಳನ್ನು ಶಿಕ್ಷಿಸುತ್ತೇವೆ ಮತ್ತು ಕ್ರಮ ಕೈಗೊಳ್ಳಲಾಗುವುದು ಎಂದು ನಾವು ಖಾತರಿಪಡಿಸುತ್ತೇವೆ ಎಂದರು.

ರಾಜ್ಯ ವಿಧಾನಸಭಾ ಚುನಾವಣೆಯ ಪ್ರಚಾರ ಏ.7ರ ಸಂಜೆ ಅಂತ್ಯಗೊಳ್ಳಲಿದ್ದು, ಏ.9ರಂದು ಮತದಾನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಾಯಕರ ಬಿರುಸಿನ ಮತಪ್ರಚಾರ ಮುಂದುವರೆದಿವೆ.

ಅತ್ತೆ-ಮಾವ ಬಯಸಿದರೆ ಸೊಸೆಯನ್ನು ಹೊರಹಾಕಬಹುದು : ದೆಹಲಿ ಹೈಕೋರ್ಟ್

ನವದೆಹಲಿ,ಏ.5-

ಸೊಸೆಯಂದಿರು ತಮ ಅತ್ತೆ-ಮಾವಂದಿರನ್ನು ಮನೆಯಿಂದ ಹೊರಹಾಕುತ್ತಾರೆ ಎಂದು ಆಗಾಗ್ಗೆ ಕೇಳಿಬರುತ್ತಿದೆ. ವೃದ್ಧ ಅತ್ತೆ-ಮಾವಂದಿರು ಶಾಂತಿಯುತವಾಗಿ ಬದುಕಲು ಅರ್ಹರಾಗಿರುವುದರಿಂದ ಅವರು ಬಯಸಿದರೆ ಸೊಸೆಯನ್ನು ಮನೆಯಿಂದ ಹೊರಹಾಕಬಹುದು ಎಂದು ದೆಹಲಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಕೌಟುಂಬಿಕ ಹಿಂಸಾಚಾರ ಕಾಯ್ದೆಯಡಿ, ಸೊಸೆಗೆ ಜಂಟಿ ಕುಟುಂಬದ ಮನೆಯಲ್ಲಿ ವಾಸಿಸುವ ಹಕ್ಕಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ವೃದ್ಧ ಅತ್ತೆ-ಮಾವಂದಿರು ಶಾಂತಿಯುತವಾಗಿ ಬದುಕಲು ಅರ್ಹರಾಗಿರುವುದರಿಂದ ಅವರು ಬಯಸಿದರೆ ಸೊಸೆಯನ್ನು ಮನೆಯಿಂದ ಹೊರಹಾಕಬಹುದು ಎಂದಿದೆ.

ಹೈಕೋರ್ಟ್ ತೀರ್ಪು ಏನು?

ಸೊಸೆಯೊಬ್ಬರು ತನ್ನ ಅತ್ತೆ-ಮಾವನ ಮನೆಯಲ್ಲಿ ವಾಸಿಸುವ ಹಕ್ಕನ್ನು ನಿರಾಕರಿಸಿದ ಕೆಳ ನ್ಯಾಯಾಲಯದ ಆದೇಶದ ವಿರುದ್ಧ ಸಲ್ಲಿಸಿದ್ದ ಮೇಲನವಿ ಅರ್ಜಿ ವಿಚಾರಣೆಯಲ್ಲಿ ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಯೋಗೇಶ್ ಖನ್ನಾ ಅವರು, ಅವಿಭಕ್ತ ಕುಟುಂಬದ ಸನ್ನಿವೇಶದಲ್ಲಿ, ಆಸ್ತಿ ಮಾಲೀಕರು ತಮ ಸೊಸೆಯನ್ನು ತಮ ಆಸ್ತಿಯಿಂದ ಹೊರಗಿರಿಸಲು ಹಕ್ಕು ಹೊಂದಿರುತ್ತಾರೆ ಎಂದು ಹೇಳಿದ್ದಾರೆ.

ಅತ್ತೆ-ಮಾವಂದಿರು ಕ್ರಮವಾಗಿ

3ನೇ ಪುಟಕ್ಕೆ

ಜಿಲ್ಲಾಡಳಿತದಿಂದ ಡಾ.ಬಾಬು ಜಗಜೀವನ ರಾಮ್ 119ನೇ ಜನ್ಮದಿನೋತ್ಸವ

ಸಮಾನತೆ ಇಲ್ಲದ ಸ್ವಾತಂತ್ರ್ಯ ಅಪೂರ್ಣ: ಜಿಲ್ಲಾಧಿಕಾರಿ ನಿತೀಶ್ ಕೆ

ರಾಯಚೂರು ಏ.05-

ಸಮಾನತೆ ಇಲ್ಲದ ಸ್ವಾತಂತ್ರ್ಯ ಅಪೂರ್ಣ ಎಂದು ಡಾ. ಬಾಬು ಜಗಜೀವನ ರಾಮ್ ಅವರು ಅಂದೇ ಹೇಳಿದ್ದರು ಹಾಗಾಗಿ ಸಮಾಜದಲ್ಲಿ ಜಾತಿ ಬೇಧ ಮರೆತು ಸಮಾನತೆಗಾಗಿ ಎಲ್ಲರೂ ಶ್ರಮಿಸಬೇಕೆಂದು ಜಿಲ್ಲಾಧಿಕಾರಿ ಕೆ. ನಿತೀಶ್ ಅವರು ಹೇಳಿದರು.

ಏಪ್ರಿಲ್ 05ರ ಭಾನುವಾರ ದಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಅವರು ಬಿಹಾರ ರಾಜ್ಯದಲ್ಲಿ ಜನಿಸಿದಾಗ ಅಂದಿನ ಜಾತಿ ವ್ಯವಸ್ಥೆಯ ತಾರತಮ್ಯ ಅವರ ಬಾಲ್ಯದ ದಿನಗಳಲ್ಲಿ ಹಲವಾರು ಕಹಿ ಘಟಕಗಳೆಗಳು ಜರುಗಿದವು. ಅವರು ಎದೆ ಗುಂದದೆ ಹೋರಾಡಿ ಇತಿಹಾಸ ನಿರ್ಮಿಸಿ ಶಿಕ್ಷಣವೇ ಮನಗೆ ಶಕ್ತಿ ಎಂದು ಎಲ್ಲಾ ಶೋಷಿತ ಜನರಿಗೆ ಹೇಳಿದರು.

ದೇಶದ ಸ್ವಾತಂತ್ರ್ಯ ಸಮಯದಲ್ಲಿ ಗಾಂಧೀಜಿಯವರ ಪ್ರೇರಣೆಯಿಂದ



ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದ್ದರು. ಸಂವಿಧಾನ ರಚನಾ ಸಮಿತಿ ಸದಸ್ಯರಾಗಿ ಶೋಷಿತ ಜನರಿಗೆ ಹಕ್ಕು ನೀಡುವಲ್ಲಿ ಬಹುಮುಖ್ಯ ಪಾತ್ರವಹಿಸಿದ್ದರು. ನನ್ನ ಹೋರಾಟ ಆಂಗ್ಲರ ವಿರುದ್ಧ ಅಲ್ಲ ಅಸಮಾನತೆ ವಿರುದ್ಧ ಎಂದು ಅವರು ಹೇಳಿದರು. ನಮ್ಮ ದೇಶದ ಸಂವಿಧಾನ ರಚನೆಯಾದ ನಂತರ ಕೇಂದ್ರ ಸರಕಾರದಲ್ಲಿ ವಿವಿಧ ಇಲಾಖೆಗಳ ಸಚಿವರಾಗಿದ್ದರು. ಕಾರ್ಮಿಕ ಸಚಿವರಾಗಿ ಕಾರ್ಮಿಕರು ಘನತೆ ಜೀವನ ನಡೆಸಲು ಹಲವಾರು ಕಾನೂನುಗಳನ್ನು ಜಾರಿಗೆ ತಂದರು. ರಕ್ಷಣಾ ಸಚಿವರಾಗಿ ಇಂಡೋ-ಪಾಕಿಸ್ತಾನ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿ ದೇಶದ ಸೈನಿಕರಿಗೆ ಧೈರ್ಯ ತುಂಬಿ ದೇಶಕ್ಕೆ ವಿಜಯ ತಂದರು. ಕೃಷಿ ಸಚಿವರಾಗಿ ದೇಶದಲ್ಲಿ ಹಸಿರು ಕ್ರಾಂತಿಯನ್ನೆ ಮಾಡಿದರು. ನಾವು ಇಂದು ನಿಶ್ಚಿಂತೆಯಿದ ಊಟ ಮಾಡುತ್ತಿದ್ದೆವೆ ಎಂದರೆ ಇದಕ್ಕೆ ಅವರೆ ಕಾರಣ ಎಂದು ಹೇಳಿದರು.

ಸಂಕಷ್ಟ ನಮಗೆ ಬರುವುದು ಶಕ್ತಿಶಾಲಿಯಾಗಿ ಮಾಡಲು ಬಲಹೀನರಾಗಿ ಮಾಡಲು ಅಲ್ಲ ಎಂದು ತಳ ಸಮುದಾಯದ ಜನರಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದರು. ಈ ಸಮಾಜದಲ್ಲಿ ಸಮಾನತೆ ಬರಬೇಕಾದರೆ ಶಿಕ್ಷಣದಿಂದ ಸಾಧ್ಯ ಎಂದು ಅವರು ಪದೇ - ಪದೇ ಹೇಳಿದ್ದರು. ಹಾಗಾಗಿ ತಳ ಸಮುದಾಯದ ಎಲ್ಲಾ ಮಕ್ಕಳು ಶಿಕ್ಷಣ ಪಡೆಯಬೇಕು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ ಪ್ರಮಾಣ ಕಡಿಮೆ ಇದ್ದು, ಹೆಚ್ಚಿನ ಜನರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಮೂಲಕ ಬಾಬು ಜಗಜೀವನರಾಮ್ ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವರ ಕನಸುಗಳನ್ನು ನಾವೆಲ್ಲರೂ ನನಸು ಮಾಡಬೇಕಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ರಾಯಚೂರು ಮಹಾನಗರ ಪಾಲಿಕೆಯ ಸದಸ್ಯ ಕಾರ್ಯದರ್ಶಿ ಹಾಗೂ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ ಅವರು ಮಾತನಾಡಿ, ಡಾ.ಬಾಬು ಜಗಜೀವನರಾಂ ಅವರು ಸಮಾಜದಲ್ಲಿ ಜಾತಿ ಬೇಧ ಮರೆತು ಸಮಾನತೆಗಾಗಿ ಶ್ರಮಿಸಿದ್ದ ಶ್ರೇಷ್ಠ ರಾಜಕೀಯ ಮುತ್ಸದ್ದಿ ಆಗಿ ಕಾರ್ಯನಿರ್ವಾಹಣೆ ಮಾಡಿದ್ದಾರೆ ಎಂದರು.

ಸಪುಟ ದರ್ಜೆಯ ಸಚಿವರಾಗಿ ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ಮಹಾನ್ ನಾಯಕ. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ, ಶಿಕ್ಷಣದಿಂದ ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಬದಲಾವಣೆ ಕಾಣಲು ಸಾಧ್ಯವಿದೆ ಎಂದು ಅವರು ನಂಬಿದ್ದವರು ಎಂದು ಹೇಳಿದರು.

ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡಿದ್ದಾಗ ಮಾತ್ರ ಒಳ್ಳೆಯ ಉದ್ಯೋಗ ಅಧಿಕಾರ ಪಡೆಯಲು ಸಾಧ್ಯವಿದೆ. ಎಲ್ಲಾ ಸಮಾಜದವರು ಒಗ್ಗೂಡಿ ಇಂತಹ ಮಹಾನ್ ವ್ಯಕ್ತಿಗಳ ಜೀವನ ಕುರಿತು ಅರಿತುಕೊಳ್ಳಬೇಕು. ಅವರ ಸಾಧನೆ ಇಂದಿನ ಜನಾಂಗಕ್ಕೆ ಪ್ರೇರಣೆ ಆಗಬೇಕು ಎಂದರು.

3ನೇ ಪುಟಕ್ಕೆ

ಡಾ.ಬಾಬು ಜಗಜೀವನ ರಾಮ್ 119ನೇ ಜನ್ಮ ದಿನಾಚರಣೆ: ವಿವಿಧ ಗಣ್ಯರಿಂದ ಮಾಲಾರ್ಪಣೆ

ರಾಯಚೂರು ಏಪ್ರಿಲ್ 05

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆಯ ಅಂಗವಾಗಿ ಇಂದು ನಗರದ ರೈಲ್ವೆ ನಿಲ್ದಾಣದ ಹತ್ತಿರ ಇರುವ ಡಾ.ಬಾಬು ಜಗಜೀವನ ರಾಮ್ ಅವರ ಪುತ್ಥಳಿಗೆ ವಿವಿಧ ಗಣ್ಯರಿಂದ ಪೂಜೆ ಕಾರ್ಯಕ್ರಮ ನೆರವೇರಿಸಿ, ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಲಾಯಿತು.



ಇದೇ ಸಂದರ್ಭದಲ್ಲಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ್ ನಾಯಕ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಹರೀಶ್, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇ

3ನೇ ಪುಟಕ್ಕೆ

ಜೆಸ್ಕಾಂನಿದ ಏಪ್ರಿಲ್ 07ರಂದು ವಿದ್ಯುತ್ ವ್ಯತ್ಯಯ

ರಾಯಚೂರು,ಏ.05

ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 2ರ 110 ಕೆ.ವಿ ಮೇಸ್, ಎಪಿಎಮ್‌ಸಿ ಯಾರ್ಡ್ 3 ಡ್ರಾಗ್‌ಹೌಸ್ ಲಿಂಕ್ ಲೈನ್ ಕಾಮಗಾರಿ ನಡೆಯುವ ಪ್ರಯುಕ್ತ ಏಪ್ರಿಲ್ 07ರ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಅಲ್ಲಮಪ್ರಭು ಕಾಲೋನಿ, ಪೋತಗಲ್ ರೋಡ, ಎಲ್.ಬಿ.ಎಸ್. ನಗರ, ಅಲಿ ಕಾಲೋನಿ, ಚಂದ್ರಬಡ ರಸ್ತೆ, ಸಂತೋಷ ನಗರ, ವಿಶ್ವನಾಥ ಕಾಲೋನಿ, ಪೋತಗಲ್ ಕ್ರಾಸ್, ಆಶ್ರಯ ಕಾಲೋನಿ ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

3ನೇ ಪುಟಕ್ಕೆ

ಕೃ.ವಿ.ವಿ ರಾಯಚೂರಿನಲ್ಲಿ ಡಾ. ಬಾಬು ಜಗಜೀವನ್‌ರಾಮ್ ಜಯಂತಿ ಆಚರಣೆ



ರಾಯಚೂರು, ಏ.05-

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಆಯೋಜಿಸಿದ ಡಾ.ಬಾಬು ಜಗಜೀವನ್ ರಾವ್‌ರವರ 119ನೇ ಜಯಂತೋತ್ಸವ ಆಚರಣೆ ಮಾಡಲಾಯಿತು. ಗೌರವಾನ್ವಿತ ಕುಲಪತಿಗಳಾದ ಡಾ.ಎಂ.ಹನುಮಂತಪ್ಪನವರು, ಹಾಗೂ ಕೃ.ವಿ.ವಿ, ರಾಯಚೂರಿನ ಅಧಿಕಾರಿಗಳು ಡಾ. ಬಾಬು ಜಗಜೀವನ್‌ರಾಮ್‌ರವರ ಭಾವ ಚಿತ್ರ ಕ್ಕೆ ಪೂಜೆ ಮತ್ತು ಪುಷ್ಪಾರ್ಚನೆ ಮಾಡಿದರು. ಪ್ರಸ್ತಾವಿಕ ನುಡಿಗಳನ್ನುಡಾ. ವಿಜಯಕುಮಾರ್ ಕುರನಳ್ಳಿಕರ್ ಸಹ-ಪ್ರಾಧ್ಯಾಪಕರು ಬೀಜಘಟಕ, ಕೃವಿವಿ., ರಾಯಚೂರುಇವರು ನಡೆಸಿಕೊಟ್ಟರು.

ಕೃವಿವಿ.,ರಾಯಚೂರಿನ ಶಿಕ್ಷಣ ನಿರ್ದೇಶಕರಾದಡಾ.ಗುರುರಾಜ್ ಸುಂಕದರವರು,ಹಸಿರು ಕ್ರಾಂತಿಯ ಹರಿಕಾರ ಹಾಗೂ ದೂರದೃಷ್ಠಿ ನಾಯಕರಾದಡಾ. ಬಾಬು ಜಗಜೀವನ್ ರಾವ್ ರವರಜೀವನ ಚರಿತ್ರೆ, ಅಲ್ಲದೇ ಅವರು ದೀನದಲಿತರ ಸಮಾ ನತೆಗಾಗಿ ಹೋರಾಟ ಮಾಡಿರು ವುದನ್ನು ಸ್ಮರಿಸಿದರು, ಸ್ವಾತಂತ್ರ್ಯ ಹೋರಾಟಗಾರರಾಗಿ, ಸಂವಿಧಾನದರಚನೆಯ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಅದೇ ರೀತಿಯಾಗಿ ಬಾಬುಜಿರವರವನ್ನು ಹಸಿರು ಕ್ರಾಂತಿಯ ಹರಿಕಾರ ಮತ್ತು ಕಾರ್ಮಿಕ ಖಾತೆಯ ಶಿಲ್ಪಿಯೆಂದು ಪ್ರಖ್ಯಾತಿ ಹೊಂದಿರುತ್ತಾರೆ, ಬಾಬುಜಿರವರು ಭಾರತ ದೇಶದ ಉಪ-ಪ್ರಧಾನಿಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸುತ್ತಾ, 30 ವರ್ಷಗಳ ಕಾಲ ರಾಜಕೀಯದಲ್ಲಿ ಸಕ್ರೀಯವಾಗಿ ಭಾಗವಹಿಸಿ ವಿವಿಧಖಾತೆಯ ಸಚಿವರಾಗಿ ಸೋಲ್ಲಿಲ್ಲದ ಸರದಾರ ಎಂಬ ಬಿರುದನ್ನು ಸಹ ಪಡೆದುಕೊಂಡಿರುತ್ತಾರೆಎಂಬುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಗೌರವಾನ್ವಿತ ಕುಲಪತಿಗಳಾದ ಡಾ.ಎಂ. ಹನುಮಂತಪ್ಪನವರು, ಡಾ. ಬಾಬು ಜಗಜೀವನ್‌ರಾವ್‌ಭಾರತದ ಸರಕಾರದ ಕೃಷಿ ನೀತಿ ನಿರೂಪಿಸುತ್ತಅವರು ಕೃಷಿ ಸಚಿವರಾಗಿದ್ದಾಗ ಕೃಷಿ ಅಭಿವೃದ್ಧಿಯ ನೀಲಿನಕ್ಷೆ ರೂಪಿಸಿ, ಅವುಗಳನ್ನು ಅನುಷ್ಠಾನ ಮಾಡಿ, ಇಂದಿನ ಸದೃಢ ಹಸಿವು ಮುಕ್ತ

3ನೇ ಪುಟಕ್ಕೆ

ಪ.ಪಂಚಾಯತಿಯಲ್ಲಿ ಬಾಬು ಜಗ ಜೀವನ ರಾವ್ ಜಯಂತಿ

ಬಾಬೂಜಿ ಆದರ್ಶ ಅಳವಡಿಸಿಕೊಳ್ಳೋಣ -ಹಾಜಿಚೌದ್ರಿ



ಸಿರವಾರ.ಏ.05-

ಅಧಿಕಾರ ಮತ್ತು ಐಶ್ವರ್ಯದಿಂದ ಗಳಿಸಲಾಗದ ಕೀರ್ತಿಯನ್ನು ಸೇವೆ, ತ್ಯಾಗದಿಂದ ಸಂಪಾದಿಸಬಹುದು ಎನ್ನುವ ಸಂದೇಶ ಸಾರಿದ ಹೆಗ್ಗಳಿಕೆ , ದೇಶದಲ್ಲಿ ತಲೆದೋರಿದ ಆಹಾರ ಸಮಸ್ಯೆ ಹೋಗಲಾಡಿಸಿ, ಹಸಿರು ಕ್ರಾಂತಿಗೆ ಕಾರಣರಾದರು. ಅಂತಹ ಮಹಾನ್ ನಾಯಕರ ಆದರ್ಶಗಳನ್ನು ಪಾಲಿಸಬೇಕಿದೆ ಎಂದು ಪ.ಪಂಚಾಯತಿ ಅಧ್ಯಕ್ಷ ಹಾಜಿಚೌದ್ರಿ ಹೇಳಿದರು.

ಪಟ್ಟಣ ಪಂಚಾಯತಿಯಲ್ಲಿ ಮಾಜಿ ಉಪ ಪ್ರಧಾನಿ ದಿ.ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡುವ ಮೂಲಕ 119 ನೇ ಜಯಂತಿಯನ್ನು ಆಚರಣೆ ಮಾಡಲಾಯಿತು.

ಈ ಕುರಿತು ಪ.ಪಂಚಾಯತಿ ಮುಖ್ಯಾಧಿಕಾರಿ ಸುರೇಶ ಶೆಟ್ಟಿ ಮಾತನಾಡಿ ಸಮಾಜ ಸುಧಾರಣೆ ಹಾಗೂ ಎಲ್ಲರೂ ಸಮಾನವಾಗಿ ಜೀವನ ನಡೆಸಬೇಕು ಎನ್ನುವ ಮಹತ್ವಾಕಾಂಕ್ಷೆಯನ್ನು ಅವರು ಹೊಂದಿದ್ದರು. ಕಾರ್ಮಿಕರ ಏಳಿಗೆಯನ್ನು ಸದಾ ಬಯಸುತ್ತಿದ್ದರು. ದೇಶದ ಜನರು ಅಹಾರ ಕೊರತೆ ಅನು ಭವಿಸುತ್ತಿರುವುದನ್ನು ಕಂಡು ಹಸಿರು ಕ್ರಾಂತಿ ಪ್ರಾರಂಭಿಸಿ ನೆರವಾದರು ಎಂದು ತಿಳಿಸಿದರು. ಸದಸ್ಯರಾದ ಮಾರ್ಕಪ್ಪ ಹೆಚ್, ಕೃಷ್ಣನಾಯಕ ಮಾತನಾಡಿ ಬಾಬು ಜಗಜೀವನರಾಂ ಅವರು ದೇಶ ಕಂಡ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಹಾಗೂ ದಕ್ಷ ಆಡಳಿತಗಾರರಾಗಿದ್ದರು. ಹಸಿರು ಕ್ರಾಂತಿಯ ಹರಿಕಾರರಾಗಿ ಜನಸಾಮಾನ್ಯರು ಎಂದಿಗೂ ಮರೆಯದ ವ್ಯಕ್ತಿತ್ವವನ್ನು ಹೊಂದಿದ್ದರು. ಬಡವರು, ದೀನ, ದಲಿತರ ಕಣ್ಣೀರು ಒರೆಸಿದ ಶ್ರೇಷ್ಠ ವ್ಯಕ್ತಿತ್ವದವರಾಗಿದ್ದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಲಕ್ಷ್ಮೀ ಆದೆಪ್ಪ, ಮಾಜಿ ಅಧ್ಯಕ್ಷ ವೈ.ಭೂಪನಗೌಡ, ಸದಸ್ಯರಾದ ಹಸೇನ ಅಲಿಸಾಬ್, ಸೂರಿ ದುರುಗಣ್ಣನಾಯಕ, ಅಜೀತ್ ಹೊನ್ನಟಗಿ, ಮೌಲಾಸಾಬ

3ನೇ ಪುಟಕ್ಕೆ

ಜಿ.ಪಂನಿದ ಕುಡಿಯುವ ನೀರಿನ ಸಮಸ್ಯೆಗಳಿಗೆ ಸಹಾಯ ವಾಣಿ ಆರಂಭ

ರಾಯಚೂರು,ಏ.05-

ಬೇಸಿಗೆ ನಿಮಿತ್ತ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಜಲ ಮೂಲಗಳ ಕೊರತೆ ಅಥವಾ ಜಲಮೂಲಗಳು ಬತ್ತಿಹೋಗುವ ಮೂಲಕ ತಲೆದೂರಬಹುದಾದ ಕುಡಿಯುವ ನೀರಿನ ಸಮಸ್ಯೆ ಹಾಗೂ ಅನೈರ್ಮಲ್ಯ ವಾತಾವರಣದಿಂದಾಗಿ ಉಂಟಾಗಬಹುದಾದ ಆನಾರೋಗ್ಯದ ಸಮಸ್ಯೆಗಳನ್ನು ಯಶಸ್ವಿಯಾಗಿ ನಿಯಂತ್ರಿಸಿ ಅಗತ್ಯ ಪರಿಹಾರ ಕಲ್ಪಿಸಲು ಆಯಾ ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸಂಸ್ಥೆಗಳಿದ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಜಿಲ್ಲಾ ಪಂಚಾತಿಯ ಕುಂದುಕೊರತೆ ನಿವಾರಣಾ ಘಟಕದ

3ನೇ ಪುಟಕ್ಕೆ

ಗೃಹಲಕ್ಷ್ಮಿ ಯೋಜನೆ: ಲೈಂಗಿಕ ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಬದುಕಿಗೆ ಬಲ

ರಾಯಚೂರು,ಏ.05-

ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರೆಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ಮೂಲಕ ಲೈಂಗಿಕ ಅಲ್ಪಸಂಖ್ಯಾತರು ಹಾಗೂ ಮಹಿಳೆಯರ ಜೀವನದಲ್ಲಿ ಮಹತ್ವದ ಬದಲಾವಣೆ ಕಂಡುಬಂದಿದೆ ಎಂದು ಫಲಾನುಭವಿಗಳು ಅಭಿಪ್ರಾಯಪಟ್ಟರು.



ನಗರದ ಆಪ್ತಮಿತ್ರ ಎನ್‌ಜಿಒ (ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ರಾಯಚೂರು) ಸಂಸ್ಥೆಯ ಅಧ್ಯಕ್ಷರಾದ ಪ್ರಜ್ವಲ್ ನಾಯಕ (ವಂದನಾ ನಾಯಕ) ಹಾಗೂ ಸಲಹೆಗಾರ ಮೌಲಾಲಿ ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಯೋಜನೆಯ ಫಲಾನುಭವಿಗಳ ಅನಿಸಿಕೆಗಳನ್ನು ಸಂಗ್ರಹಿಸಲಾಯಿತು.

ಫಲಾನುಭವಿಗಳಾದ ಕೀರ್ತನಾ, ಅಂಕಿತ ಮತ್ತು ರಶ್ಮಿಕಾ ತಮ್ಮ ಅನುಭವ ಹಂಚಿಕೊಂಡು, ''ಸರ್ಕಾರ ಮತ್ತು ಆಪ್ತಮಿತ್ರ ಸಂಸ್ಥೆಯ ಸಹಕಾರದಿಂದ ನಾವು ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಇನ್ನಷ್ಟು ಜನರನ್ನು ಗುರುತಿಸಿ, ಅವರಿಗೆ ಸಹ ಈ ಯೋಜನೆಯ ಲಾಭ ತಲುಪಿಸುವ ಮೂಲಕ ಅವರ ಬದುಕನ್ನೂ ಸುಧಾರಿಸಬೇಕು'' ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಪ್ರಜ್ವಲ್ ನಾಯಕ (ವಂದನಾ ನಾಯಕ) ಅವರು, ''ಸಮಾಜದ ತುಳಿತಕ್ಕೆ ಒಳಗಾದ ಲೈಂಗಿಕ ಅಲ್ಪಸಂಖ್ಯಾತರು ಹಾಗೂ ಮಹಿಳೆಯರನ್ನು ಗುರುತಿಸಿ, ಅವರಿಗೆ ಆರ್ಥಿಕ ನೆರವು ನೀಡುವಲ್ಲಿ ಸಿದ್ದರಾಮಯ್ಯ ಸರ್ಕಾರ ಯಶಸ್ವಿಯಾಗಿದೆ. ಇಂತಹ ಯೋಜನೆಗಳು ಸಮಾನತೆ ಮತ್ತು ಸ್ವಾಭಿಮಾನಕ್ಕೆ ದಾರಿ

3ನೇ ಪುಟಕ್ಕೆ

ಆತ್ಮರಕ್ಷಣೆ ದೈಹಿಕ ಶಕ್ತಿಯ ಪ್ರದರ್ಶನವಲ್ಲ, ಅದು ಆತ್ಮವಿಶ್ವಾಸದ ಸಂಕೇತ : ಜಿಲ್ಲಾಧಿಕಾರಿ



ವಿಜಯನಗರ,ಏ.05-

ಮಹಿಳೆ ಅಬಲೆಯಲ್ಲ ಸಬಲೆ. ಆತ್ಮರಕ್ಷಣೆ ಎಂಬುದು ಕೇವಲ ದೈಹಿಕ ಶಕ್ತಿಯ ಪ್ರದರ್ಶನವಲ್ಲ, ಅದು ಆತ್ಮವಿಶ್ವಾಸದ ಸಂಕೇತ. ಪ್ರತಿಯೊಬ್ಬ ಹೆಣ್ಣು ಸಂಕಷ್ಟದ ಸಮಯದಲ್ಲಿ ತನ್ನನ್ನು ತಾನು ರಕ್ಷಿಸಿಕೊಳ್ಳುವ ಕೌಶಲ್ಯ ಹೊಂದಿರಬೇ ಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ತಿಳಿಸಿದರು.

ನಗರದ ವಿಜಯನಗರ ಕಾಲೇಜಿನಲ್ಲಿ ವಿಜಯನಗರ ಕಾಲೇಜ್, ಮಹಿಳಾ ಸಬಲೀಕರಣ ಕೋಶ ಸಹಯೋಗದಲ್ಲಿ ಶನಿವಾರ ಆಯೋಜಿಸಲಾಗಿದ್ದ ಮಹಿಳೆಯರಿಗೆ ಸ್ವಯಂ ರಕ್ಷಣೆ ಕುರಿತ ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ವೈದ್ಯಕೀಯ, ಕಲೆ, ವಾಸ್ತುಶಿಲ್ಪ, ಉದ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ಅದಷ್ಟೇ ಅಲ್ಲದೇ ಬಾಹ್ಯಾಕಾಶ ಸಂಶೋಧನೆಯಂತಹ ಉನ್ನತ ಕ್ಷೇತ್ರಗಳಲ್ಲೂ ಮಹಿಳೆಯರು ಮುನ್ನುಗ್ಗುತ್ತಿರುವುದು ಹೆಮ್ಮೆಯ ಸಂಗತಿ. ಇಷ್ಟೆಲ್ಲಾ ಸಬಲೀಕರಣಗೊಳ್ಳುತ್ತಿದ್ದರು ಇಂದಿಗೂ ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯ ಪ್ರಕರಣಗಳು ಮಾತ್ರ ಕಡಿಮೆಯಾಗಿಲ್ಲ. ಆದ್ದರಿಂದ ಪ್ರತಿಯೊಬ್ಬ ಮಹಿಳೆಯೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಬಲರಾಗಬೇಕಿದೆ. ಈ ನಿಟ್ಟಿನಲ್ಲಿ ಪೋಷಕರು ಸಹ ಕೇವಲ ಹೆಣ್ಣು ಮಕ್ಕಳಿಗೆ ಸುರಕ್ಷಿತವಾಗಿರು ಎಂದು ಹೇಳುವುದಕ್ಕಿಂತ ಹೆಚ್ಚಾಗಿ, ಗಂಡು ಮಕ್ಕಳಿಗೆ ಹೆಣ್ಣು ಮಕ್ಕಳನ್ನು, ಗುರು ಹಿರಿಯರನ್ನು ಗೌರವಿಸುವ ಉತ್ತಮ ಸಂಸ್ಕಾರ ಕಲಿಸಬೇಕು. ಆಗದಾಗ ಸಮಾಜದಲ್ಲಿ ನಡೆಯುವ ಶೇ. 99. ರಷ್ಟು ಕೃತ್ಯಗಳನ್ನು ತಡೆಯಬಹುದು.

ಆದರೆ ಇಂದಿನ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶದಲ್ಲಿ ಮಹಿಳೆಯರ ಸುರಕ್ಷತೆ ಮುಖ್ಯ. ಎಲ್ಲಾ ಸಂದರ್ಭದಲ್ಲೂ ಕೇವಲ ಕಾನೂನು ಮತ್ತು ಪೊಲೀಸ್ ವ್ಯವಸ್ಥೆಯಿಂದ ಮಾತ್ರ ಸುರಕ್ಷತೆ ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬ ಮಹಿಳೆಯೂ ಸಮಾಜದಲ್ಲಿ ಉಂಟಾಗುವ ಸಂಕಷ್ಟದ ಸಂದರ್ಭಗಳನ್ನು ಎದುರಿಸಲು ಆತ್ಮರಕ್ಷಣಾ ತಂತ್ರಗಳನ್ನು ಕಲಿಯುವುದು ಅನಿವಾರ್ಯತೆ ಎಂದು ತಿಳಿಸಿದ ಅವರು, ಮಹಿಳಾ ಹಕ್ಕುಗಳು ಮತ್ತು ತುರ್ತು ಸಂದರ್ಭದಲ್ಲಿ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ ಮಾತನಾಡಿ, ಮಹಿಳಾ ಸಬಲೀಕರಣ ಎಂದರೆ ಸ್ವೇಚ್ಛಾಚಾರವಲ್ಲ. ಬದಲಿಗೆ ಸರಿ ತಪ್ಪು ವಿಮರ್ಶಿಸಿ ಯಾವುದು ಸರಿ ಇದೆ ಎಂಬುದನ್ನರಿತು ಮಾಡುವುದು ತಮ್ಮ ಜವಾಬ್ದಾರಿ. ವಿದ್ಯಾರ್ಥಿಗಳು ಪೋಷಕರು ನೀಡಿದ ಶಿಕ್ಷಣ ಮತ್ತು ಅವಕಾಶಗಳನ್ನು ಬಳಸಿಕೊಂಡು ಸಮಾಜದಲ್ಲಿ ಘನತೆಯ ವ್ಯಕ್ತಿಗಳಾಗಿ ಬಾಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಇಂದಿನ ಜಗತ್ತಿನಲ್ಲಿ ಮಾಹಿತಿಯ ಕೊರತೆಯಿಲ್ಲ, ಆದರೆ ಆಕರ್ಷಕವಾಗಿರುವುದಕ್ಕೆ ಮಾರು ಹೋಗದೆ ಜೀವನಕ್ಕೆ ಪೂರಕವಾದುದನ್ನ ಆಯ್ದುಕೊಳ್ಳಬೇಕು. ದೈಹಿಕ ದೌರ್ಜನ್ಯದ ವಿರುದ್ಧ ಆತ್ಮರಕ್ಷಣೆ ಕಲಿಯುವುದು ಎಷ್ಟು ಮುಖ್ಯವೋ, ಸಾಮಾಜಿಕ ಮಾಧ್ಯಮಗಳ ಕೆಟ್ಟ ಪ್ರಭಾವದಿಂದ ಉಂಟಾಗುವ ಮಾನಸಿಕ ದೌರ್ಜನ್ಯದಿಂದ ರಕ್ಷಿಸಿಕೊಳ್ಳು ವುದು ಅಷ್ಟೇ ಮುಖ್ಯ ಎಂದರು.

ಮಹಿಳಾ ಸಬಲೀಕರಣ ಕೋಶ ಸಂಯೋಜಕಿ ಡಾ.ಸುಷ್ಮಾ ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಹಿಂದೆ ಮಹಿಳೆ ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಪತಿ ಹಾಗೂ ವೃದ್ಧಾಪ್ಯದಲ್ಲಿ ಮಕ್ಕಳ ರಕ್ಷಣೆಯಲ್ಲಿ ಇರಬೇಕಿತ್ತು. ಆದರೆ ಇಂದು ಮಹಿಳೆ ತಾನೇ ಸಬಲಳಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತು ಎಲ್ಲರನ್ನೂ ರಕ್ಷಿಸುವ ಹಂತಕ್ಕೆ ತಲುಪಿದ್ದಾಳೆ. ಅದರಂತೆ ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರಂತಹ ಸಾಧಕಿಯರು ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ.

ಅದೇ ರೀತಿ ಒಂದು ಕಡೆ ಸಾಧಕಿಯರ ಪಟ್ಟಿ ಬೆಳೆಯುತ್ತಿದ್ದರೆ, ಮತ್ತೊಂದೆಡೆ ಮಹಿಳೆಯರ ಮೇಲಿನ ದೌರ್ಜನ್ಯಗಳು ಸಹ ಏರಿಕೆ ಯಾಗುತ್ತಿರುವುದು ಆತಂಕಕಾರಿ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯೂರೋ (ಫೆಇಕ್ಸಆ) ವರದಿಯ ಪ್ರಕಾರ ಶೇ. 40ರಷ್ಟು ಮಹಿಳೆಯರು ಇಂದಿಗೂ ಮನೆ ಮತ್ತು ಕೆಲಸದ ಸ್ಥಳಗಳಲ್ಲಿ ಅಸುರಕ್ಷಿತ ಭಾವನೆ ಹೊಂದಿದ್ದಾರೆ. ಶೇ.90.2ರಷ್ಟು ಅಪಹರಣ ಪ್ರಕರಣಗಳು, ಶೇ.31 ರಷ್ಟು ಪತಿಯಿಂದಲೇ ಕಿರುಕುಳ ಹಾಗೂ ಶೇ.18ರಷ್ಟು ಲೈಂಗಿಕ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ.

ಕೇವಲ ಕೆಲವು ಮಹಿಳೆಯರು ಸಾಧನೆ ಮಾಡುವುದು ಸಬಲೀಕರಣದ ಮಾನದಂಡವಲ್ಲ. ಸಾಮಾನ್ಯ ಮಹಿಳೆಯ ಮನೆ, ಮನಸ್ಸು ಮತ್ತು ಜೀವನ ಸಬಲವಾದಾಗ ಮಾತ್ರ ಸಬಲೀಕರಣಕ್ಕೆ ನಿಜವಾದ ಅರ್ಥ ಸಿಗಲಿದೆ. ಮಹಿಳಾ ಸಬಲೀಕರಣವು ಕೇವಲ ಮಹಿಳೆಯರಿಗೆ ಸೀಮಿತವಾದ ವಿಷಯವಲ್ಲ. ಇದು ಸ್ತ್ರೀ ಮತ್ತು ಪುರುಷರಿಬ್ಬರ ಸಮಾನ ಪ್ರಯತ್ನದಿಂದ ಸಾಧ್ಯ. ಸಮಾಜವು ಒಂದು ಹಕ್ಕಿಯಿದ್ದಂತೆ, ಅದಕ್ಕೆ ಸ್ತ್ರೀ ಮತ್ತು ಪುರುಷ ಎಂಬ ಎರಡು ರೆಕ್ಕೆಗಳು ಬಲವಾಗಿದ್ದಾಗ ಮಾತ್ರ ಸಮಾಜ ಪ್ರಗತಿ ಹೊಂದಲು ಸಾಧ್ಯ ಎಂದರು. ಈ ವೇಳೆ ವಿಜಯನಗರ ಮಹಾವಿದ್ಯಾಲಯ ಆಡಳಿತ ಮಂಡಳಿ ಅಧ್ಯಕ್ಷ ಎನ್. ಮಲ್ಲಿಕಾರ್ಜುನ ಮೆಟ್ರಿ, ಪ್ರಾಂಶುಪಾಲರಾದ ಮಹಾಂತೇಶ್ ಎನ್.ಆರಾಧ್ಯಮಠ, ಕಿರ್ಲೋಸ್ಕರ್ ಎವಿ ಕ್ಲಬ್ ನ ಜಂಟಿ ಕಾರ್ಯದರ್ಶಿ ಭಾಗ್ಯ, ವಕೀಲೆ ಅನಿತಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ತಂತ್ರಜ್ಞಾನದ ಸಮರ್ಪಕ ಬಳಕೆಯಿಂದ ನ್ಯಾಯಧಾನಕ್ಕೆ ವೇಗ: ನ್ಯಾ. ಸಿ.ಎಂ.ಪೂಣಚ್ಚ

ಕೊಪ್ಪಳ ಏ.05-

ತಂತ್ರಜ್ಞಾನದ ಸಮರ್ಪಕ ಬಳಕೆಯಿಂದ ನ್ಯಾಯ ನೀಡುವ ಪ್ರಕ್ರಿಯೆಗೆ ಹೆಚ್ಚು ವೇಗ ಸಿಗಲಿದೆ ಎಂದು ಕರ್ನಾಟಕ ಹೈಕೋರ್ಟ್‌ನ ನ್ಯಾಯಾಧೀಶರು ಮತ್ತು ಕೊಪ್ಪಳ ಜಿಲ್ಲೆಯ ಆಡಳಿತ ನ್ಯಾಯಾಧೀಶರಾದ ಗೌರವಾನ್ವಿತ ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರು ಹೇಳಿದರು.

ಜಿಲ್ಲಾ ನ್ಯಾಯಾಂಗ ಇಲಾಖೆ, ಲೋಕೋಪಯೋಗಿ ಇಲಾಖೆ ಕೊಪ್ಪಳ ಹಾಗೂ ಬಾರ್ ಅಸೋಸಿಯೇಷನ್ ಯಲಬುರ್ಗಾ ಇವರ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 04ರಂದು ಯಲಬುರ್ಗಾ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಯಲಬುರ್ಗಾ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಡಿಜಿಟಲ್ ನ್ಯಾಯವ್ಯವಸ್ಥೆಯು ಸಾರ್ವಜನಿಕ ಸೇವೆ ಮತ್ತು ಸುಧಾರಿತ ಮೂಲಸೌಕರ್ಯಕ್ಕೆ ಹೊಸ ದಿಕ್ಕಾಗಿದೆ. ನ್ಯಾಯಾಂಗ ವ್ಯವಸ್ಥೆಯ ಆಧುನೀಕರಣವು ಈ ಕಾಲದ ಅವಶ್ಯಕತೆಯಾಗಿದೆ. ತಂತ್ರಜ್ಞಾನವನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವುದರಿಂದ ನ್ಯಾಯಧಾನದ ಪ್ರಕ್ರಿಯೆ ತ್ವರಿತವಾಗಿ ಪಾರದರ್ಶಕವಾಗಿ ಹಾಗೂ ಜನಸ್ನೇಹಿಯಾಗಿ ರೂಪುಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ತಂತ್ರಜ್ಞಾನಕ್ಕೆ ವಿಶೇಷ ಒತ್ತು ನೀಡಲಾಗುತ್ತಿದ್ದು, ಇ-ಕೋರ್ಟ್ ವ್ಯವಸ್ಥೆ, ಇ-ಫೈಲಿಂಗ್, ವಿಡಿಯೋ ಕಾನ್ಫರೆನ್ಸ್ ವಿಚಾರಣೆ, ಡಿಜಿಟಲ್ ಸಾಕ್ಷ್ಯ ಸಂಗ್ರಹಣೆ ಹಾಗೂ ಆನ್‌ಲೈನ್ ಕೇಸ್ ಟ್ರ್ಯಾಕಿಂಗ್ ವ್ಯವಸ್ಥೆಗಳಂತಹ ತಾಂತ್ರಿಕ ವಿಧಾನಗಳು ನಡೆಯುತ್ತಿವೆ. ನ್ಯಾಯಾಲಯಗಳಿಗೆ ಆಗಮಿಸದೇ ವಕೀಲರು ಹಾಗೂ ವಾದಿಗಳು ಪ್ರಕರಣಗಳ ಸ್ಥಿತಿಯನ್ನು ತಿಳಿದುಕೊಳ್ಳುವಂತಾಗಬೇಕು. ಇದು ಸಮಯ ಮತ್ತು ವೆಚ್ಚದ ಉಳಿತಾಯಕ್ಕೆ ಸಹಾಯಕವಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಭಾಗದಲ್ಲಿ ನ್ಯಾಯ ಸೌಲಭ್ಯ ವಿಸ್ತರಣೆ, ಯಲಬುರ್ಗಾದಂತಹ ಪಟ್ಟಣಗಳಲ್ಲಿ ಆಧುನಿಕ ನ್ಯಾಯಾಲಯ ಸಂಕೀರ್ಣ ನಿರ್ಮಾಣವು ಗ್ರಾಮೀಣ ಜನತೆಗೆ ಬಹು ಉಪಯುಕ್ತವಾಗಲಿದೆ. ಇದರಿಂದ ದೂರದ ನಗರಗಳಿಗೆ ತೆರಳುವ ಅವಶ್ಯಕತೆ ಕಡಿಮೆಯಾಗುವುದಲ್ಲದೇ ಸ್ಥಳೀಯ ಮಟ್ಟದಲ್ಲೇ ನ್ಯಾಯ ದೊರೆಯುವ ವ್ಯವಸ್ಥೆಯು ಸಹ ಬಲವಾಗುತ್ತದೆ. ಈ ನೂತನ ನ್ಯಾಯಾಲಯ ಕಟ್ಟಡದಲ್ಲಿ ಹಲವು ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ವಿಶಾಲ ಹಾಗೂ ಸುಸಜ್ಜಿತ ನ್ಯಾಯಾಂಗ ಸಭಾಂಗಣಗಳು, ಡಿಜಿಟಲ್ ದಾಖಲೆ ಸಂಗ್ರಹಣಾ ವ್ಯವಸ್ಥೆ, ಸಾರ್ವಜನಿಕರಿಗಾಗಿ ಆರಾಮದಾಯಕ ನಿರೀಕ್ಷಣಾ ವ್ಯವಸ್ಥೆ ಮಾಡಿರುವುದು ವಿಶೇಷವಾಗಿದೆ ಎಂದರು.

ನ್ಯಾಯಾಂಗ ಸೇವೆಯ ವೇಗ ಮತ್ತು ಗುಣಮಟ್ಟ ತುಂಬಾ ಪ್ರಮುಖವಾಗಿದ್ದು, ನ್ಯಾಯ ನೀಡುವಲ್ಲಿ ವಿಳಂಬವು ನ್ಯಾಯ ನಿರಾಕರಣೆಯಂತೆ ಎಂಬ ಮಾತಿನಂತೆ ಪ್ರಕರಣಗಳ ಶೀಘ್ರ ನಿವಾರಣೆಗೆ ನ್ಯಾಯಾಂಗ ಅಧಿಕಾರಿಗಳು ಹಾಗೂ ವಕೀಲರು ಸಹಕಾರ ನೀಡಬೇಕು. ಮಧ್ಯಸ್ಥಿಕೆ ಮತ್ತು ಪರ್ಯಾಯ ವಿವಾದ ಪರಿಹಾರ (ಎಡಿಆರ್) ವಿಧಾನಗಳ ಬಳಕೆ ಹೆಚ್ಚಿಸುವುದರಿಂದ ನ್ಯಾಯಾಲಯಗಳ ಮೇಲಿನ ಒತ್ತಡ ಕಡಿಮೆಯಾಗಬಹುದು.



ಹಿಟ್ ಆಂಡ್ ರನ್ ಅಪಘಾತ ಪ್ರಕರಣಗಳಲ್ಲಿ 26 ಸಂತ್ರಸ್ಥರಿಗೆ ಪರಿಹಾರ ಧನ ಮಂಜೂರು -ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್

ಕಲಬುರಗಿ.ಏ.5

ಹಿಟ್ ಆಂಡ್ ರನ್ ಅಪಘಾತದ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 26 ಸಂತ್ರಸ್ಥರಿಗೆ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರ ಅಧ್ಯಕತೆಯಲ್ಲಿ ಪರಿಹಾರ ಅನುಮೋದನೆ ನೀಡಲಾಯಿತು.

ಗುರುವಾರದಂದು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಂಡಿಸಲಾದ 27 ಪ್ರಕರಣಗಳಲ್ಲಿ 26 ಪ್ರಕರಣಗಳನ್ನು ಜಿಲ್ಲಾಧಿಕಾರಿಗಳು, ಜನರಲ್ ಇನ್ಸೂ ರೆನ್ಸ್ ಕೌನ್ಸಿ ಲ್ ಕಮಿಷನರ್ ಹಾಗೂ ಕಲಬುರಗಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರ ಸಹಮತಿಯೊಂದಿಗೆ ಪರಿಹಾರ ಧನ ಮಂಜೂರಾತಿ ಮಾಡಲು ಅನುಮೋದಿಸಲಾಯಿತು.

ಹಿಟ್ ಆಂಡ್ ರನ್ ಅಪಘಾತ ಪ್ರಕರಣಗಳು ಸಂಭವಿಸಿದಲ್ಲಿ ಸಂಬಂಧಪಟ್ಟ ಪೋಲಿಸ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಡಿಕ್ಕಿ ಮಾಡಿದ ವಾಹನವು ಪತ್ತೆಯಾಗದೆ ಇದ್ದಲ್ಲಿ ಅಂತಹ ಪ್ರಕರಣಗಳಿಗೆ ಸಂಬಂಧಪಟ್ಟ ಸಹಾಯಕ ಆಯುಕ್ತರು Claim Enquiry Officer ಆಗಿದ್ದು ಅವುಗಳನ್ನು ವಿಚಾರಣೆ ಮಾಡಿ ಸದರಿ Hit and Run ಅಪಘಾತದ ಸಭೆಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು Settlement Commissioner ಆಗಿದ್ದು, General Insurance Councilಗೆ ಪರಿಹಾರ ಧನ ನೀಡಲು ಅನುಮೋದನೆ ನೀಡುತ್ತಾರೆ.

General Insurance Council ಕಂಪನಿಯವರ ಇತ್ತೀಚಿನ ಭಾರತದ ಹೆದ್ದಾರಿ ಮತ್ತು ಸಾರಿಗೆ ಮಂತ್ರಾಲಯ ಆದೇಶದಂತೆ ಮೃತಪಟ್ಟವರಿಗೆ ರೂ. 2,00,000/- (ಎರಡು ಲಕ್ಷ) ಮತ್ತು ಗಾಯಗೊಂಡವರಿಗೆ ರೂ. 50,000/- (ರೂಪಾಯಿ ಐವತ್ತು ಸಾವಿರ) ಪರಿಹಾರ ಧನವನ್ನು ನೇರವಾಗಿ ಮೃತ ವಾರಸುದಾರರು ಮತ್ತು ಗಾಯಗೊಂಡವರ ಖಾತೆಗೆ ಪಾವತಿಸಲಾಗುತ್ತದೆ. ಈ ಸಂಬಂಧ ಕೆಲ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪೋಲಿಸ ಠಾಣೆಗೆ ನೀಡಬೇಕಾಗುತ್ತದೆ. ಇದರ ಉಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಲು ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಸದರಿ ಸಭೆಯಲ್ಲಿ ಎಸ್ಪಿ ಅಡ್ಡೂರು ಶ್ರೀನಿವಾಸಲು, ಸಹಾಯಕ ಆಯುಕ್ತೆ ಆಲದಕಟ್ಟಿ, ಸೇಡಂ ಸಹಾಯಕ ಆಯುಕ್ತ ಪ್ರಭು ರಡ್ಡಿ, ಉಪಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಆನಂದ ಪಾರ್ಥನಹಳ್ಳಿ, ಸಂಚಾರಿ ಪೊಲೀಸ್ ಇನ್ಸ ಪೆಕ್ಟರ್ ಶಕೀಲ ಯುನೈಟೆಡ್ ಇನ್ಸೂ ರೆನ್ಸ್ , ಕಂಪನಿಯ ಅಧಿಕಾರಿ ರಾಜೀವ ರೆಡ್‌ಕ್ರಾಸ್ ಪರವಾಗಿ ರವೀಂದ್ರ ಶಾಬಾದಿ, ಉಪಸ್ಥಿತರಿದ್ದರು.

ವಿದ್ಯಾಗಿರಿಯಲ್ಲಿ ಹಿಂದೂ ನಾಯಕರಿಂದ ಭರ್ಜರಿ ಮತಯಾಚನೆ

ಉಪಚುನಾವಣೆಯಿಂದ ರಾಜ್ಯಕ್ಕೆ ಹೊಸ ದಿಕ್ಸೂಚಿ: ಸುನೀಲ್ ಕುಮಾರ

ಬಾಗಲಕೋಟೆ

ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುವುದರ ಮೂಲಕ ಮುಂದಿನ ಸಾರ್ವತ್ರಿಕ ಚುನಾವಣೆಗೆ ಮುನ್ನುಡಿ ಬರೆಯಲಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ಪರವಾದ ಒಳ್ಳೆಯ ವಾತಾವರಣವಿದ್ದು ಉಪಚುನಾವಣೆ ಮೂಲಕ ರಾಜ್ಯಕ್ಕೆ ಹೊಸ ದಿಕ್ಸೂ ಚಿ ಸಿಗಲಿದೆ ಎಂದು ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ ಹೇಳಿದರು.

ಉಪಚುನಾವಣೆ ನಿಮಿತ್ತ ನವನಗರದದ ವಾರ್ಡ್ ನಂ. 33ರಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ಪರ ಮತಯಾಚನೆ ಮಾಡಿ ಮಾತನಾಡಿದ ಅವರು ಬಿಜೆಪಿ ಅಭಿವೃದ್ಧಿ ಕಾರ್ಯಗಳ ಅರಿವು ಈ ಕ್ಷೇತ್ರದ ಜನರಿಗೆ ಇದೆ. ಮೂರು ವರ್ಷಗಳ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಆರೋಪ ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಮುಸ್ಲಿಂ ಅತಿಯಾದ ಓಲೈಕೆಯಿಂದ ಅಶಾಂತಿ ಸೃಷ್ಟಿ, ಶಿವಾಜಿ ಮೆರವಣಿಗೆ, ಗಣೇಶ ಮೆರವಣಿಗೆಗಳ ಮೇಲೆ ಕಲ್ಲು ತೂರಾಟಗಳು ಕಾಂಗ್ರೆಸ್ ನೀತಿಗೆ ಕಾರಣವಾಗಿವೆ. ಹೆಸರಿಗಷ್ಟೆ ಜೋಡೆತ್ತು ಎಂದುಕೊಂಡಿರುವ ಸಿದ್ದರಾಮಯ್ಯ ಮತ್ತು ಡಿಕೆಶಿ ಬೇರೆ ಬೇರೆ ದಿಕ್ಕಿನಲ್ಲಿ ಓಡುತ್ತಿದ್ದಾರೆ. ಸರಕಾರದಲ್ಲಿ ಅಭಿವೃದ್ಧಿ ಅನ್ನುವುದು ಕನಸು ಮಾತ್ರ. ಈ ಬಾರಿಯ ಬಜೆಟ್ ಅಲ್ಲಿ 1 ಲಕ್ಷ 32 ಸಾವಿರ ಕೋಟೆ ರೂ. ಸಾಲ ಮಾಡಿ



ರಾಜ್ಯವನ್ನು ಸಾಲದ ಶೂಲಕ್ಕೆ ಏರಿಸಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಸರಕಾರಿ ನೌಕರರಿಗೆ ಸಂಬಳ ಕೊಡಲೂ ಆಗದ ಆರ್ಥಿಕ ಸಂದಿಗ್ಧ ಪರಿಸ್ಥಿತಿಯನ್ನು ರಾಜ್ಯಕ್ಕೆ ತಂದಿದ್ದಾರೆ. ಬಾಗಲಕೋಟೆಯಲ್ಲಿ ಮುಖ್ಯಮಂತ್ರಿಗಳು ಐದು ದಿನ ಬೀಡು ಬಿಟ್ಟಿದ್ದು ಕಾಳಜಿಗಾಗಿ ಅಲ್ಲ ಸೋಲಿನ ಭಯಕ್ಕಾಗಿ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಮಾತನಾಡಿ ಭ್ರಷ್ಟ ಆಡಳಿತ ಇಷ್ಟವಿಲ್ಲ ಎಂಬ ಸಂದೇಶವನ್ನು ಸರಕಾರಕ್ಕೆ ಕೊಡಲು ಜನರು ಮುಂದಾಗಿದ್ದಾರೆ.ಗ್ಯಾರಂಟಿಗಳು ಎಸ್.ಸಿಪಿ, ಟಿಎಸ್.ಪಿ ಅನುದಾನಗಳಲ್ಲಿಯೇ ಬಳಕೆಯಾಗಬೇಕಿತ್ತಾ. ದಲಿತರ ಮೇಲೆ ಕಾಳಜಿ ಇದ್ದಿದ್ದರೆ ಅವರ ಹಣವನ್ನು ಗ್ಯಾರಂಟಿಳಿಗೆ ಬಳಕೆ ಮಾಡಿದ್ದು ಯಾಕೆ, ಅಲ್ಪಸಂಖ್ಯಾತರ ಹಣವನ್ನು ಏಕೆ ಬಳಕೆ ಮಾಡಿಕೊಳ್ಳಲಿಲ್ಲ. ಅಲ್ಪಸಂಖ್ಯಾತರಿಗೆ ಹತ್ತು ಸಾವಿರ ಕೋಟಿ ಕೊಟ್ಟ ಸಿದ್ದರಾಮಯ್ಯ ಹಿಂದೂಗಳ ಕಲ್ಯಾಣಕ್ಕೆ ಎಷ್ಟು ಕೋಟಿ ಕೊಟ್ಟಿದ್ದಾರೆ ಎಂದು ಸರಕಾರದ ವಿರುದ್ಧ ಪ್ರಶ್ನೆಗಳ ಸುರಿಮಳೆಗೈದರು. ಕಳ್ಳೆತ್ತು ವಾಲ್ಮೀಕಿ ನಿಗಮ, ಬೋವಿ ನಿಗಮದ ಹಣ ನುಂಗಿ ಅಭಿವೃದ್ಧಿ ಕೆಲಸ ಒಂದೂ ಮಾಡದೇ ಸುಳ್ಳು ಹೇಳಿ ಕಾಲಹರಣ ಮಾಡಿತು. ಇದರ ಮೇಲೆಯೇ ದುಡಿಯೋ ಎತ್ತು ಯಾವುದು ಕಳ್ಳೆತು ಯಾವುದು ಎಂದು ಜನಕ್ಕೆ ಗೊತ್ತಾಗುತ್ತದೆ. ಕೇಂದ್ರ ಸರಕಾರ ಅಕ್ಕಿಯನ್ನು ಕೊಡದಿದ್ದರೆ ಇವರ ಹಣೆ ಬರಹ ಗೊತ್ತಾಗುತ್ತಿತ್ತು. ಮೋದಿ ಅವರು ಕೊಟ್ಟಿರುವುದನ್ನು ಕೇವಲ ಮುಟ್ಟಿ ಕೊಟ್ಟು ತಾವು ಕೊಟ್ಟಿದ್ದೇವೆ ಎಂದು ಬೀಗುತ್ತಾರೆ ಇದು ಯಾವ ಸೀಮೆಯ ನ್ಯಾಯ. ಸಿದ್ದರಾಮಯ್ಯ ಸಾಲ ಮಾಡಿದ್ದು ಸುಳ್ಳಾ ಸ್ವತಃ ಮುಖ್ಯಮಂತ್ರಿಗಳೇ ಐದು ಲಕ್ಷ ಕೋಟಿಗೂ ಹೆಚ್ಚು ಸಾಲ ಮಾಡಿದ್ದಾರೆ. ಗ್ಯಾರಂಟಿ ನಾನು ಕೊಟ್ಟಿದ್ದು ಎಂದು ಹೇಳಿದ ಹಾಗೆ ಸಾಲ ನಾನೇ ಮಾಡಿದ್ದು ಎಂದು ಹೇಳಲಿ. ಬೆಲೆಗಳ ಹೆಚ್ಚಳದಿಂದ ಇಪ್ಪತ್ತು ರುಪಾಯಿ ಬಾಂಡ್ ಪೇಪರ್ ಕೂಡ ಮಾಯ ಮಾಡಿದ್ದಾರೆ. ಜನ ವತ್ತೆ ಇಟ್ಟ ತಮ್ಮ ಚಿನ್ನಕ್ಕೆ ಹಣ ಕಟ್ಟುವ ಸ್ಥಿತಿಗೆ ತಂದು ಇಟ್ಟಿದ್ದಾರೆ. ಬಾಗಲಕೋಟೆ ಹಿಂದುತ್ವ ಕೋಟೆ ಇಲ್ಲಿ ಬಿಜೆಪಿ ಗೆಲ್ಲಬೇಕು ಎಂದರು.

ವೀರಣ್ಣ ಚರಂತಿಮಠ ಮನೆ ಮನೆಗೆ ತೆರಳಿ ಮತಯಾಚನೆಮಾಡಿದರು ಈ ವೇಳೆ ವಿಧಾನ ಪರಿಷತ ಸದಸ್ಯರಾದ ಪಿ. ಎಚ್. ಪೂಜಾರ,ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಸೇರಿದಂತೆ ಸಾವಿರಾರು ಜನ ಕಾರ್ಯಕರ್ತರು ಭಾಗವಹಿಸಿದ್ದರು.

ಪೋಟೋ 01 ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ಕಾರ್ಕಳ ಶಾಸಕ ವಿ.ಸುನೀಲಕುಮಾರ, ಮಾಜಿ ಸಚಿವ ಸಿ.ಟಿ ರವಿ ಅವರರೊಂದಿಗೆ ವಿದ್ಯಾಗಿರಿಯಲ್ಲಿ ಮತಯಾಚನೆ ಮಾಡಲಾಯಿತು.

ಟೆಕ್ಸ್‌ಟೈಲ್ಸ್ ಪಾರ್ಕ್ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಕೆಕೆಸಿಸಿಐ ತಂಡ



ಕಲಬುರಗಿ:

ಕಲ್ಯಾಣ ಕರ್ನಾಟಕ ಭಾಗದ ಮಹತ್ವದ ಯೋಜನೆಯಾದ ಪಿಎಂ ಮಿತ್ರ ಮೆಗಾ ಟೆಕ್ಸ್ ಟೈಲ್ಸ್ ಪಾರ್ಕ್ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಲು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಕೆಕೆಸಿಸಿಐ) ತಂಡ ಸ್ಥಳಕ್ಕೆ ಭೇಟಿ ನೀಡಿತು.

ಕೆಕೆಸಿಸಿಐ ಅಧ್ಯಕ್ಷ ಶರಣಬಸಪ್ಪ ಎಂ. ಪಪ್ಪಾ ಹಾಗೂ ಕಾರ್ಯದರ್ಶಿ ಶಿವರಾಜ್ ವಿ. ಇಂಗಿನಶೆಟ್ಟಿ ಅವರ ನೇತೃತ್ವದಲ್ಲಿ ತಂಡ ಪರಿಶೀಲನೆ ನಡೆಸಿತು.

ಪರಿಶೀಲನೆಯ ವೇಳೆ ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ಮೂಲಕ ಸುಮಾರು 100 ಕೋಟಿ ರೂ. ಮೌಲ್ಯದ ಕಾಮಗಾರಿಗಳನ್ನು ಆರಂಭಿಸಿರುವುದು ಗಮನಕ್ಕೆ ಬಂದಿದೆ. ಪಾರ್ಕ್‌ಗೆ ಸಂಪರ್ಕ ಕಲ್ಪಿಸುವ 1.5 ಕಿಲೋಮೀಟರ್ ಪ್ರವೇಶ ರಸ್ತೆ ಕಾಮಗಾರಿ ಪ್ರಾರಂಭವಾಗಿದ್ದು, ಭೀಮಾ ನದಿಯ ಮೇಲೆ ನಿರ್ಮಾಣವಾಗುತ್ತಿರುವ 280 ಮೀಟರ್ ಉದ್ದದ ಬ್ಯಾರೇಜ್‌ನಲ್ಲಿ ಈಗಾಗಲೇ 110 ಮೀಟರ್ ಕಾಮಗಾರಿ ಪೂರ್ಣಗೊಂಡಿದೆ. ಉಳಿದ ಕೆಲಸ ಮೇ ಅಥವಾ ಜೂನ್ ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

2023ರ ಮಾರ್ಚ್ 28ರಂದು ಉದ್ಘಾಟನೆಯಾದ ಈ ಯೋಜನೆಗೆ ಮೂರು ವರ್ಷಗಳ ವಿಳಂಬದ ನಂತರ ಕಾಮಗಾರಿ ಆರಂಭವಾಗಿರುವುದನ್ನು ಕೆಕೆಸಿಸಿಐ ತೀವ್ರ ಅಸಮಾಧಾನದಿಂದ ಗಮನಿಸಿದೆ. ಕಾಮಗಾರಿ ಆರಂಭವಾಗಿರುವುದು ಸ್ವಾಗತಾರ್ಹವಾದರೂ, ಈ ವಿಳಂಬ ಅಸ್ವೀಕಾರಾರ್ಹವಾಗಿದೆ. ಇಂತಹ ಪ್ರಮುಖ ಯೋಜನೆಗಳಲ್ಲಿ ಸಮಯ ಪಾಲನೆ ಅತ್ಯಗತ್ಯವಾಗಿದ್ದು, ಸರ್ಕಾರ ಯಾವುದೇ ಕಾರಣ ಹೇಳದೆ ವೇಗವಾಗಿ ಮತ್ತು ಕಾಲಬದ್ಧವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ನಿಯೋಗ ಅಭಿಪ್ರಾಯಪಟ್ಟಿದೆ.

ಯೋಜನೆಯ ಅನುಷ್ಠಾನಕ್ಕಾಗಿ ಕೆಕೆಸಿಸಿಐ ಕೇಂದ್ರ, ಹಾಗೂ ರಾಜ್ಯ ಸರ್ಕಾರಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಜವಳಿ ಸಚಿವ 'ರೊಂದಿಗೆ ಹಂತ ಹಂತವಾಗಿ ಅನುಸರಣೆ ಮಾಡುತ್ತಿದೆ. ಪಿಎಂ ಮಿತ್ರ ಟೆಕ್ಸ್ಟೈಲ್ ಪಾರ್ಕ್ ಕಲ್ಯಾಣ ಕರ್ನಾಟಕ ಭಾಗದ ಕೈಗಾರಿಕಾ ಅಭಿವೃದ್ಧಿಗೆ ಮಹತ್ವದ ಉತ್ತೇಜನ ನೀಡುವುದಲ್ಲದೆ, ಸಾವಿರಾರು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದು ಸಂಸ್ಥೆ ವಿಶ್ವಾಸ ವ್ಯಕ್ತಪಡಿಸಿದೆ.

ನಡೆಯುತ್ತಿರುವ ಕಾಮಗಾರಿಗಳನ್ನು ತಕ್ಷಣವೇ ವೇಗಗೊಳಿಸಿ, ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಸಮಕಾಲೀ ನವಾಗಿ ಕಾರ್ಯಗತಗೊಳಿಸಿ, ಪಾರ್ಕ್ ಅನ್ನು ಶೀಘ್ರದಲ್ಲಿ ಕಾರ್ಯಾಚರಣೆಗೆ ತರಬೇಕು ಎಂದು ನಿಯೋಗದ ಮುಖಂಡರು ಆಗ್ರಹಿಸಿದರು.

ಅವಧಿ ವಿಸ್ತರಣೆ

ವಿಜಯನಗರ ಏ.05-

ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರದೇಶಿಕ ಕೇಂದ್ರದಲ್ಲಿ ಸ್ನಾತಕ, ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿ ಅವಧಿಯನ್ನು ಏಪ್ರಿಲ್ 10ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿಕೃತ ಜಾಲತಾಣ ಡಿಡಿಡಿ.ಞಠಟ್ಠಃಡಿಠ್ಠ.ಚ್ಛ.ಜ್ಞಿ ನಲ್ಲಿ ಅರ್ಜಿ ಭರ್ತಿ ಮಾಡಿ ನಂತರ ಪ್ರಾದೇಶಿಕ ಕೇಂದ್ರಕ್ಕೆ ಭೇಟಿ ನೀಡಿ ಪ್ರವೇಶಾತಿ ಪಡೆಯಬಹುದಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಆವರಣ ಅಥವಾ ದೂ,ಸಂ: 8088457148, 8296680114, 8088681698 ಸಂಪರ್ಕಿಸಬಹುದು ಎಂದು ಪ್ರಾದೇಶಿಕ ನಿರ್ದೇಶಕ ಮೈತ್ರಿ ಡಿ.ಎಸ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪ್ಲಿಯಲ್ಲಿ ಅಕ್ಕಮಹಾದೇವಿ ಜಯಂತಿ ಸಂಭ್ರಮ : ಭವ್ಯ ಮೆರವಣಿಗೆ, ತೊಟ್ಟಿಲು ಕಾರ್ಯಕ್ರಮ



ಕಂಪ್ಲಿ ,ಏ.5-

12ನೇ ಶತಮಾನದ ಅದ್ವಿತೀಯ ಶಿವಶರಣೆ, ವೈರಾಗ್ಯ ನಿಧಿ ಅಕ್ಕಮಹಾದೇವಿಯ ಜಯಂತಿಯ ಅಂಗವಾಗಿ ಪಟ್ಟಣದಲ್ಲಿ ಅಕ್ಕಮಹಾದೇವಿ ಮಹಿಳಾ ಮಂಡಳಿಯ ವತಿಯಿಂದ ಭವ್ಯ ಮೆರವಣಿಗೆ, ತೊಟ್ಟಿಲು ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮಗಳು ಗುರುವಾರ ಸಂಜೆ ವಿಜೃಂಭಣೆಯಿಂದ ಜರುಗಿದವು.

ಪಟ್ಟಣದ ಸಾಂಗತ್ರಯ ಸಂಸ್ಕೃತ ಪಾಠಶಾಲೆಯ ಆವರಣದಲ್ಲಿರುವ ಅಕ್ಕಮಹಾದೇವಿಯ ಅಮೃತ ಶಿಲೆಯ ಪ್ರತಿಮೆಗೆ ಬೆಳಿಗ್ಗೆ ವಿವಿಧ ಅಭಿಷೇಕಗಳನ್ನು ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಸಂಜೆ ಅಲಂಕೃತ ವಾಹನದಲ್ಲಿ ಅಕ್ಕನ ಪ್ರತಿಮೆಯನ್ನು ಇಟ್ಟು ಹೂಗಳು ಹಾಗೂ ವಿದ್ಯುದೀಪ 'ಗಳಿಂದ ಅಲಂಕರಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆ ಬಳಿಕ ಶ್ರೀ ಅಕ್ಕಮಹಾದೇವಿ ದೇವಸ್ಥಾನದಲ್ಲಿ ತೊಟ್ಟಿಲು ಕಾರ್ಯಕ್ರಮವನ್ನು ಮಹಿಳಾ ಮಂಡಳಿಯ ಪದಾಧಿಕಾರಿಗಳು ಹಾಗೂ ಸಮಾಜದ ಮಹಿಳೆಯರು ತೊಟ್ಟಿಲು ಹಾಡುಗಳನ್ನು ಹಾಡುವ ಮೂಲಕ ನೆರವೇರಿಸಿದರು.

ನಂತರ ಲಿಂ. ಗೊಗ್ಗ ವಿಶಾಲಾಕ್ಷಮ್ಮನವರ ಸ್ಮರಣಾರ್ಥ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ನೂರಾರು ಮಹಿಳೆಯರಿಗೆ ಉಡಿ ತುಂಬಿ ಗೌರವಿಸಲಾಯಿತು. ಬಳಿಕ ಧರ್ಮಸಭೆ ಹಾಗೂ ಅನ್ನಸಂತರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಮಹಿಳಾ ಮಂಡಳಿಯ ಅಧ್ಯಕ್ಷೆ ಡಾ. ಶಾರದಾ ಜಗನ್ನಾಥ್ ಹಿರೇಮಠ ಸೇರಿದಂತೆ ಪದಾಧಿಕಾರಿಗಳು, ವೀರಶೈವ ಸಂಘದ ಮುಖಂಡರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಮಹಿಳೆಯರು ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ಅತ್ತೆ-ಮಾವ ಬಯಸಿದರೆ ಸೊಸೆಯನ್ನು ಹೊರಹಾಕಬಹುದು : ದೆಹಲಿ ಹೈಕೋರ್ಟ್

74 ಮತ್ತು 69 ವರ್ಷ ವಯಸ್ಸಿನವರಾಗಿದ್ದು, ಅವರ ಮಗ ಮತ್ತು ಸೊಸೆಯ ನಡುವಿನ ವೈವಾಹಿಕ ಭಿನ್ನಾಭಿಪ್ರಾಯದಿಂದ ಪ್ರಭಾವಿತರಾಗದೆ ಶಾಂತಿಯುತವಾಗಿ ಬದುಕುವ ಹಕ್ಕನ್ನು ಹೊಂದಿದ್ದಾರೆ.

ಎರಡೂ ಪಕ್ಷಗಳ ನಡುವಿನ ಸಂಬಂಧವು ಹದಗೆಟ್ಟಿದೆ ಮತ್ತು ವಯಸ್ಸಾದ ಅತ್ತೆ-ಮಾವಂದಿರು ತಮ ಜೀವನದ ಈ ಹಂತದಲ್ಲಿ ಅರ್ಜಿದಾರಾಳದ ಸೊಸೆಯೊಂದಿಗೆ ವಾಸಿಸುವುದು ಸೂಕ್ತವಲ್ಲ . ವೃದ್ಧ ದಂಪತಿಗಳು ತಮ ಮನೆಯಲ್ಲಿಯೇ ಇರುತ್ತಾರೆ, ಆದರೆ ಮಗ ಮತ್ತು ಸೊಸೆ ಅನಾನುಕೂಲವಾಗಿದ್ದರೆ, ಅವರು ಬೇರೆಡೆ ವಾಸಿಸಲು ಆಯ್ಕೆ ಮಾಡಬಹುದು ಎಂದು ನ್ಯಾಯಾಧೀಶರು ಹೇಳಿದಾರೆ.

ಸಮಾನತೆ ಇಲ್ಲದ ಸ್ವಾತಂತ್ರ್ಯ ಅಪೂರ್ಣ

ಜಿಲ್ಲೆಯ ಮಾನ್ವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರಾದ ಡಾ.ಬಸವರಾಜ ಕರಡಿಗುಡ್ಡ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಮಾಜಿ ಉಪ ಪ್ರಧಾನಿ ಬಾಬು ಜಗಜೀವನ ರಾಮ್ ಅವರು ಶೋಷಿತರ ಹಕ್ಕಿಗಾಗಿ ಹೋರಾಡಿದವರು, ಹಸಿರು ಕ್ರಾಂತಿಯ ಹರಿಕಾರ. ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ರು, ಕೃಷಿ, ರಕ್ಷಣಾ ಸಚಿವರಾಗಿ ಸೇವೆ ಸಲ್ಲಿಸಿದ್ರು, ಅವರ ಸೇವೆ ಸ್ಮರಣೀಯವಾದದು. ಅವರ ಜೀವನ ಚರಿತ್ರೆ ಯುವ ಪೀಳಿಗೆಗೆ ತಲುಪಿಸುವ ಕಾರ್ಯ ನಡೆಯಬೇಕು ಎಂದರು.

ದೇಶವು ಹಸಿವಿನಿಂದ ಬಳಲುತ್ತಿರುವ ವೇಳೆಯಲ್ಲಿ ದೇಶದ ಪರಿಸ್ಥಿತಿ ಅರಿತುಕೊಂಡು ಒಂದು ರೂಪುರೇಷೆಯನ್ನು ತಯಾರಿಸಿಕೊಂಡರು. ರೈತರು ಆಹಾರ ಧಾನ್ಯದಲ್ಲಿ ಹೆಚ್ಚುವರಿ ಇಳುವರಿ ಪಡೆಯಲು ಆಧುನಿಕ ಕೃಷಿ ಸಲಕರಣೆಗಳನ್ನು ಪರಿಚಯಿಸುವುದರ ಮೂಲಕ ಕೃಷಿಯಲ್ಲಿ ಬಹುದೊಡ್ಡ ಬದಲಾವಣೆ ತಂದರು ಎಂದರು.

ಬಾಬೂಜಿ ಅವರ ಮಹತ್ಕಾರ್ಯದಿಂದಾಗಿ ರೈತರು ಹೆಚ್ಚಿನ ಇಳುವರಿ ಮತ್ತು ಆರ್ಥಿಕ ಅಭಿವೃದ್ಧಿ ಕಾಣಲು ಸಾಧ್ಯವಾಯಿತು. ತಮಗೆ ಸಿಕ್ಕಂತಹ ಅಧಿಕಾರವನ್ನು ದೇಶದ ಅಭಿವೃದ್ಧಿ ಮತ್ತು ಸಮಸ್ಯೆಗಳ ನಿವಾರಣೆಗಾಗಿ ಅವಿರತವಾಗಿ ಶ್ರಮಿಸಿದ್ದ ಮಹಾನ್ ನಾಯಕ ಎಂದು ಬಣ್ಣಿಸಿದರು.

ಇದೇ ಸಂದರ್ಭದಲ್ಲಿ ರಾಯಚೂರು ತಹಶೀಲ್ದಾರ್ ಸುರೇಶ ವರ್ಮ ಅವರು ಭಾರತ ಸಂವಿಧಾನದ ಪೀಠಿಕೆಯನ್ನು ಎಲ್ಲರಿಗೆ ಭೋದಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ: ಹತ್ತನೇ ತರಗತಿಯಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಾದ ಶ್ರೇಯಾ ತಂದೆ ಸೋಮಪ್ಪ, ಶ್ರೀದೇವಿ ತಂದೆ ಶಿವರಾಜ, ಸ್ಫೂರ್ತಿ ಬಂಡಿವಡ್ಡರ ತಂದೆ ಶಿವಪ್ಪ ಬಂಡಿವಡ್ಡರ್ ಅವರಿಗೆ ಡಾ.ಬಾಬು ಜಗಜೀವನ ರಾಮ್ ಅವರ ಜಯಂತಿ ಅಂಗವಾಗಿ ವಿವಿಧ ಗಣ್ಯರಿಂದ ಸನ್ಮಾನಿಸಿ ಗೌರವಿಸಿದರು.

ವಿವಿಧ ಗಣ್ಯರಿಂದ ಛಾಯಾಚಿತ್ರ ವೀಕ್ಷಣೆ: ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರು ಜಯಂತಿ ಅಂಗವಾಗಿ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮದಿರದಲ್ಲಿ ಬಾಬು ಜೀ ಜೀವನ, ಹೋರಾಟ, ಸಾಧನೆ ಕುರಿತು ಅವರ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಛಾಯಾಚಿತ್ರಗಳನ್ನು ಜಿಲ್ಲಾಧಿಕಾರಿಗಳು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು. ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ವಿವಿಧ ಗಣ್ಯರು, ಸಾರ್ವಜನಿಕರು ವೀಕ್ಷಣೆ ಮಾಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಆದಿಜಾಂಬವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಾಜೇಂದ್ರ ಜಲ್ದಾರ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ್ ಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜದ ಇತರರು ಇದ್ದರು.

ಡಾ.ಬಾಬು ಜಗಜೀವನ ರಾಮ್ 119ನೇ ಜನ್ಮ ದಿನಾಚರಣೆ: ವಿವಿಧ ಗಣ್ಯರಿಂದ ಮಾಲಾರ್ಪಣೆ

ಶಕರಾದ ಪ್ರವೀಣ್ ಕುಮಾರ ಮುಖಂಡರಾದ ರವಿ ಭೋಸರಾಜು, ನರಸಿಂಹಲು ಮಾಡಗಿರಿ, ಕೆ.ಶಾಂತಪ್ಪ, ಎಂ.ವಿರೂಪಾಕ್ಷಪ್ಪ, ರಾಜು, ಪವನ್ ಕುಮಾರ್, ರಾಜೇಂದ್ರ ಜಲ್ದಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜದ ಇತರರು ಇದ್ದರು.

ಇತ್ತೀಚಿಗೆ ಮುಖ್ಯಮಂತ್ರಿ ಪದಕಕ್ಕೆ ಆಯ್ಕೆಯಾದ ರಾಯಚೂರು ಡಿವೈಎಸ್ಪಿ ಶಾಂತವೀರ ಅವರಿಗೆ ಗಣ್ಯರಿಂದ ಸನ್ಮಾನ ಮಾಡಲಾಯಿತು.

ನಂತರ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆಯ ಅಂಗವಾಗಿ ನಗರದ ರೈಲ್ವೆ ನಿಲ್ದಾಣದಿಂದ ರಂಗಮಂದಿರದವರೆಗೂ ಹಮ್ಮಿಕೊಳ್ಳಲಾಗಿದ್ದ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು.

ಜೆಸ್ಕಾಂನಿದ ಏಪ್ರಿಲ್ 07ರಂದು ವಿದ್ಯುತ್ ವ್ಯತ್ಯಯ

ಹೆಚ್ಚಿನ ಮಾಹಿತಿಗಾಗಿ ನಿರಂತರ ಗ್ರಾಹಕರ ಸೇವಾ ಕೇಂದ್ರ, ದೂರ ವಾಣಿ ಸಂಖ್ಯೆ: 08532-226386, 08532-231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 2ರ ಸಹಾಯಕಕಾರ್ಯ ನಿರ್ವಾಹಕಅಭಿಯಂತರ ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

ಕೃ.ವಿ.ವಿ ರಾಯಚೂರಿನಲ್ಲಿ ಡಾ. ಬಾಬು ಜಗಜೀವನ್‌ರಾಮ್ ಜಯಂತಿ ಆಚರಣೆ

ಭಾರತರೂಪಿಸುವಲ್ಲಿಗಣನೀಯಯೋಗದಾನ ಮಾಡಿರುವುದುಅವರು ಉಲ್ಲೇಖಿಸಿದರು. ಅದೇ ರೀತಿ ಅವರ ಆದರ್ಶ ತ್ವತಗಳನ್ನು ಪ್ರತಿಯೊಬ್ಬರುತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಮುಂದುವರಿದುಈ ಕಾರ್ಯಕ್ರಮದಲ್ಲಿ ಕೃವಿವಿ.,ರಾಯಚೂರಿನಶಿಕ್ಷಣ ನಿರ್ದೇಶಕರಾದ ಡಾ.ಗುರುರಾಜ್ ಸುಂಕದರವರು, ಮತ್ತುಡಾ.ಯು.ಸತೀಸ್‌ಕುಮಾರ, ಡೀನ್ (ವಿದ್ಯಾರ್ಥಿಕ್ಷೇಮಾಭಿವೃದ್ಧಿ), ಡಾ.ಪ್ರಭುರಾಜ್ ಎ. ಡೀನ್,(ಕೃಷಿ.) ಕೃ.ಮ.ವಿ, ರಾಯಚೂರು, ಹಾಗೂ ಕೃವಿವಿ., ರಾಯಚೂರಿನ ಗ್ರಂಥಪಾಲಕರಾದ ಡಾ. ಎಮ್.ಮಚೇಂದ್ರನಾಥ್‌ರವರುಉಪಸಿತ್ತರಿದ್ದರು. ಕೃ.ವಿ.ವಿ, ರಾಯಚೂರಿನ ಶಿಕ್ಷಕ-ಶಿಕ್ಷಕೇತರ ವರ್ಗದವರು, ವಿದ್ಯಾರ್ಥಿಗಳು ಮತ್ತುಕಾರ್ಮಿಕ ಸಿಬ್ಬಂದಿ ವರ್ಗದವರು ಭಾಗವಹಿಸುವ ಮೂಲಕ ಕಾರ್ಯಕ್ರಮಕ್ಕೆ ಮೇರಗು ತಂದುಕೊಟ್ಟರು. ಡಾ. ಎಂ. ಮಹಾದೇವ ಸ್ವಾಮಿ, ಪ್ರಾಧ್ಯಾಪಕರು ಮತ್ತುನಿರ್ದೇಶಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕೋಶ ಕೃ.ವಿ.ವಿ, ರಾಯಚೂರುರವರುಸ್ವಾಗತ ಭಾಷಣಮಾಡಿದರು. ಡಾ. ಹನುಮಂತ್ ನಾಯಕ್‌ಸಹಾಯಕಪ್ರಾಧ್ಯಾಪಕರು, ಕೃವಿವಿ., ರಾಯಚೂರುರವರು ವಂದನಾರ್ಪಣೆ ಮಾಡಿದರು.ಡಾ. ರಾಜಣ್ಣ,ಪ್ರಾಧ್ಯಾಪಕರು ಮತ್ತುಉಪ-ನಿರ್ದೇಶಕರು, (ವಿ.ಕ್ಷೇ) ಕೃ.ವಿ.ವಿ.ರಾಯಚೂರುರವರುಕಾರ್ಯಕ್ರಮಕ್ಕೆ ನಿರೂಪಣೆ ನೀಡಿದರು.

ಪ.ಪಂಚಾಯತಿಯಲ್ಲಿ ಬಾಬು ಜಗ ಜೀವನ ರಾವ್ ಜಯಂತಿ ಬಾಬೂಜಿ ಆದರ್ಶ ಅಳವಡಿಸಿಕೊಳ್ಳೋಣ -ಹಾಜಿಚೌದ್ರಿ

ವರ್ಚಸ್, ಅಮರೇಶ ಗಡ್ಲ, ಚನ್ನಪ್ಪ ದೇವರಮನೆ, ಸಂದೀಪ್ ಪಾಟೀಲ್, ಮಲ್ಲಪ್ಪ, ಗ್ಯಾನಪ್ಪ,ರಂಗನಾಥ ಬೋವಿ, ಸಮುದಾಯ ಸಂಘಟನೆ ಅಧಿಕಾರಿ ಹಂಪಯ್ಯ ಪಾಟೀಲ್, ಮುಖಂಡರಾದ ಅಬ್ರಾಹಂ ಹೊನ್ನಟಗಿ, ಜಯಪ್ಪ, ಎಂ.ಮನೋಹರ್ ಚನ್ನಪ್ಪ ಬೂದಿನಾಳ, ಎಂ.ಡೇವಿಡ್, ಮಲ್ಲಿಕಾರ್ಜುನ ಸೇರಿದಂತೆ ಇನ್ನಿತರರು ಇದ್ದರು.

ಗೃಹಲಕ್ಷ್ಮಿ ಯೋಜನೆ: ಲೈಂಗಿಕ ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಬದುಕಿಗೆ ಬಲ

ತೋರಿಸುತ್ತಿವೆ'' ಎಂದು ಹೇಳಿದರು.ಸಂಸ್ಥೆಯ ಸಲಹೆಗಾರ ಮೌಲಾಲಿ ಅವರು ಮಾತನಾಡಿ, ''ಗೃಹಲಕ್ಷ್ಮಿ ಯೋಜನೆ ಮೂಲಕ ಹಲವಾರು ಕುಟುಂಬಗಳ ಬದುಕಿನಲ್ಲಿ ಸ್ಥಿರತೆ ಬಂದಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಜನರಿಗೆ ಈ ಯೋಜನೆಯ ಸೌಲಭ್ಯ ತಲುಪಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತೇವೆ'' ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಹಲವು ಫಲಾನುಭವಿಗಳು ಹಾಗೂ ಸಂಸ್ಥೆಯ ಸದಸ್ಯರು ತಮ್ಮ ಅನುಭವಗಳನ್ನು ಹಂಚಿಕೊಂಡರು.

ತಾತ್ಕಾಲಿಕ ಪಟ್ಟಿ ಪ್ರಕಟ; ಆಕ್ಷೇಪಣೆ ಸಲ್ಲಿಸಲು ಅರ್ಜಿ ಆಹ್ವಾನ

ರಾಯಚೂರು ಏ.05

ಜಿಲ್ಲೆಯ ದೇವದುರ್ಗ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. 27 ಅಂಗನವಾಡಿ ಕಾರ್ಯಕರ್ತೆಯರ ಹುದ್ದೆ ಮತ್ತು 76 ಸಹಾಯಕಿಯರ ಖಾಲಿ ಇದ್ದ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯು ಅರ್ಹ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿರುವದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಆಕ್ಷೇಪಣೆಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಆಕ್ಷೇಪಣೆ ಅರ್ಜಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ: 04.04.2026 ರಿಂದ 13.04.2026 ರೊಳಗೆ ಸಮಯ ಬೆಳಿಗ್ಗೆ 08:00 ಗಂಟೆಯಿದ ಮಧ್ಯಾಹ್ನ 01.30ರವರೆಗೆ ಸಲ್ಲಿಸಬಹುದಾಗಿದೆ.

ಉನ್ನತ ಗುರಿ ವ್ಯಕ್ತಿತ್ವ ವಿಕಾಸಕ್ಕೆ ದಾರಿ ದೀಪ : ರಂಭಾಪುರಿ ಶ್ರೀ



ಚನ್ನಗಿರಿ,ಏ.05-.

ಸಂಪತ್ತು ಬೆಳೆದಂತೆ ಮಾನವೀಯ ಸಂಬಂಧಗಳು ಸಡಿಲಗೊಳ್ಳಬಾರದು. ಸಮಾಜದ ಓರೆ ಕೋರೆಗಳನ್ನು ತಿದ್ದಿ ತೀಡುವಲ್ಲಿ ಮಠಗಳ ಪಾತ್ರ ಹಿರಿದು. ಉನ್ನತ ಗುರಿ ಮತ್ತು ಧ್ಯೇಯ ವ್ಯಕ್ತಿತ್ವ ವಿಕಾಸಕ್ಕೆ ದಾರಿದೀಪವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ನಗರದ ಹಿರೇಮಠದಲ್ಲಿ ಶ್ರೀ ಕೇದಾರೇಶ್ವರ ಗುರು ಭವನ ಉದ್ಘಾಟನೆ ಹಾಗೂ ಶ್ರೀ ಜಗದ್ಗುರು ಪಂಚಾಚಾರ್ಯ ರಥೋತ್ಸವದ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸಂತೃಪ್ತಿ ಸಮೃದ್ಧಿಗಾಗಿ ಧರ್ಮಾಚರಣೆ ಬೇಕು. ಬಿತ್ತಿದ ಬೀಜದಂತೆ ಫಸಲು ಹೇಗೋ ಹಾಗೆ ನಮ್ಮ ಆಚರಣೆಯಂತೆ ಫಲ ಪ್ರಾಪ್ತಿಯಾಗುತ್ತದೆ. ಮನುಷ್ಯ ಜೀವನದಲ್ಲಿ ಸಮಯ ಪಾಲನೆ ನಿಯಮ ಪಾಲನೆ ಮತ್ತು ಸಂಯಮ ಪಾಲನೆ ಎಲ್ಲರಲ್ಲೂ ಬೆಳೆದು ಬರುವ ಅವಶ್ಯಕತೆಯಿದೆ. ಬೆಳಕಿನಲ್ಲಿ ಬೆಳಕಿಗೆ ಬೆಲೆಯಿಲ್ಲ. ಆದರೆ ಕತ್ತಲೆಯಲ್ಲಿ ಕಿರು ದೀಪಕ್ಕೂ ಹಿರಿದಾದ ಬೆಲೆಯುಂಟು. ಮನುಷ್ಯನಿಗೆ ಸಂಪತ್ತಷ್ಟೇ ಮುಖ್ಯವಲ್ಲ. ಅದರೊಂದಿಗೆ ಧರ್ಮಪ್ರಜ್ಞೆ ಮತ್ತು ರಾಷ್ಟ್ರಪ್ರಜ್ಞೆ ಬೆಳೆದು ಬರಬೇಕಾಗಿದೆ. ನಾಗರೀಕತೆ ಮತ್ತು ಆಧುನಿಕತೆಯ ಹೆಸರಿನಲ್ಲಿ ಉತ್ಕೃಷ್ಟ ಸಂಸ್ಕೃತಿ ನಾಶಗೊಳ್ಳಬಾರದು. ಯಾವುದೇ ವಿಶ್ವವಿದ್ಯಾಲಯ ಕಲಿಸಿಕೊಡದ ಜ್ಞಾನವನ್ನು ಜೀವನಾನುಭವ ಕಲಿಸಿ ಕೊಡುತ್ತದೆ. ಅರಿವುಳ್ಳ ಮಾನವ ಜನ್ಮದಲ್ಲಿ ಅರಿತು ನಡೆದರೆ ಬದುಕು ಬಂಗಾರ ಮರೆತು ನಡೆದರೆ ಬದುಕು ಬಂಧನವಾಗುತ್ತದೆ ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ. ಜ್ಞಾನ ಕ್ರಿಯಾತ್ಮಕವಾದ ಧರ್ಮ ಪರಿಪಾಲನೆಯಿಂದ ಜಗದಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ. ಚನ್ನಗಿರಿ ಹಿರೇಮಠದ ಡಾ.ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮಿಗಳು ಸದಾ ಕ್ರಿಯಾಶೀಲರಾಗಿ ಶ್ರೀ ಮಠದ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸಿರುವುದನ್ನು ಮರೆಯಲಾಗದು. ಶ್ರೀ ಮಠದ ಪರಿಸರದಲ್ಲಿ ಶ್ರೀ ಕೇದಾರೇಶ್ವರ ಭವನ-ಗುರು ನಿವಾಸ ನಿರ್ಮಾಣ ಮಾಡಿರುವುದು ತಮಗೆ ಅತ್ಯಂತ ಸಂತೋಷ ತಂದಿದೆ ಎಂದು ಹರುಷ ವ್ಯಕ್ತಪಡಿಸಿ ಶ್ರೀಗಳವರಿಗೆ ರೇಶ್ಮೆ ಮಡಿ, ಸ್ಮರಣಿಕೆ ಫಲ ಪುಷ್ಪವಿತ್ತು ಶುಭ ಹಾರೈಸಿದರು.

ನೇತೃತ್ವ ವಹಿಸಿದ ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಹಿರೇಮಠದ ಇತಿಹಾಸದಲ್ಲಿ ಈ ಸಮಾರಂಭ ಅವಿಸ್ಮರಣೀಯವಾದುದು. ಬದುಕಿ ಬಾಳುವ ಜನಾಂಗಕ್ಕೆ ಧರ್ಮ ಸಾಹಿತ್ಯದ ಅರಿವು ಆಚರಣೆ ಬಹಳ ಮುಖ್ಯ. ಮಾನವನ ಉಸಿರಾಟಕ್ಕೆ ಗಾಳಿ ಎಷ್ಟು ಮುಖ್ಯವೋ ಅಷ್ಟೇ ಉಜ್ವಲ ಭವಿಷ್ಯಕ್ಕೆ ಆಚಾರ್ಯರ ಕೊಡುಗೆ ಅಪಾರ. ಭಕ್ತರ ಸಹಕಾರ ಮತ್ತು ನಿರಂತರ ಪರಿಶ್ರಮದಿಂದ ಇಷ್ಟೆಲ್ಲ ಅಭಿವೃದ್ಧಿ ಕಾರ್ಯಗಳು ನಡೆದಿವೆ ಎಂದು ಸಂತೃಪ್ತಿ ಭಾವನೆ ವ್ಯಕ್ತಪಡಿಸಿದ ಅವರು ಇದಕ್ಕೆಲ್ಲ ಶ್ರೀ ರಂಭಾಪುರಿ ಜಗದ್ಗುರುಗಳ ಮಾರ್ಗದರ್ಶನ ಮತ್ತು ಆಶೀರ್ವಾದವೇ ಕಾರಣವೆಂದು ಕೃತಜ್ಞತೆ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕೆ.ಮಾಡಾಳು ವಿರೂಪಾಕ್ಷಪ್ಪನವರು ಕೇದಾರೇಶ್ವರ ನಿವಾಸ ಹಾಗೂ ಕೇದಾರೇಶ್ವರ ಗುರು ಭವನವನ್ನು ಉದ್ಘಾಟಿಸಿ ಮಾತನಾಡಿ ಆಕಳು ಮಾವು ಹಾವು ಬೇವು ಇವೆಲ್ಲಾ ಒಂದೇ ಕಾಲುವೆಯ ನೀರನ್ನು ಕುಡಿದರೂ ಅವುಗಳು ಬೇರೆ ಬೇರೆ ಗುಣ ಸ್ವಭಾವಗಳನ್ನು ಹೊಂದಿವೆ. ಅದರಂತೆ ಪರಮಾತ್ಮ ಎಲ್ಲರನ್ನು ಸೃಷ್ಟಿಸಿದರೂ ಜನರ ಭಾವನೆಗಳು ಬೇರೆ ಬೇರೆಯಾಗಿವೆ. ಸದ್ಭಾವ-ಸಾಮರಸ್ಯದಿಂದ ಉತ್ತಮ ಸಮಾಜ ಕಟ್ಟಲು ಸಾಧ್ಯ. ಕೇದಾರ ಶಿವಶಾಂತವೀರ ಶಿವಾಚಾರ್ಯರು ಅತ್ಯಂತ ಸರಳ ಸಾತ್ವಿಕ ಮನೋಭಾವನೆ ಹೊಂದಿ ಮಠದ ಅಭಿವೃದ್ಧಿ ಮಾಡಿರುವುದು ಹೆಮ್ಮೆಯ ಸಂಗತಿ ಎಂದರು. ಅಧ್ಯಕ್ಷತೆ ವಹಿಸಿದ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಹೆತ್ತ ತಾಯಿ ಹೊತ್ತ ಭೂಮಿ ಎಷ್ಟು ಮುಖ್ಯವೋ ಅಷ್ಟೇ ಮನುಷ್ಯನಿಗೆ ಧರ್ಮ ಮುಖ್ಯವಾಗಿದೆ. ಆದರ್ಶ ಬದುಕಿಗಾಗಿ ನಮ್ಮ ಜೀವನದಲ್ಲಿ ಧರ್ಮ ಅಳವಡಿಸಿಕೊಂಡು ಬಾಳಿದರೆ ಬದುಕು ಉಜ್ವಲಗೊಳ್ಳುತ್ತದೆ. ಕೇದಾರ ಶಿವಶಾಂತವೀರ ಶಿವಾಚಾರ್ಯರು ರಚನಾತ್ಮಕ ಮತ್ತು ಗುಣಾತ್ಮಕ ಕಾರ್ಯಗಳ ರೂವಾರಿಗಳಾಗಿದ್ದಾರೆ ಎಂದರು. ತಿಪಟೂರು ಷಡಕ್ಷರಿ ಮಠದ ರುದ್ರಮುನಿ ಸ್ವಾಮಿಗಳು ಮಾತನಾಡಿ ಮನುಷ್ಯ ಧರ್ಮದಿಂದ ವಿಮುಖನಾದರೆ ಜೀವನ ಅಶಾಂತಿಯ ಕಡಲಾಗುತ್ತದೆ. ಧರ್ಮ ಮತ್ತು ಧರ್ಮಾಚರಣೆಯನ್ನು ಯಾರೂ ಮರೆಯದೇ ಪರಿಪಾಲಿಸಿಕೊಂಡು ಬರಬೇಕಾಗುತ್ತದೆ. ಶ್ರೀ ಕೇದಾರಲಿಂಗ ಶ್ರೀಗಳ ಶ್ರಮ ಮತ್ತು ನಿರಂತರ ಸಾಧನೆ ಮಠದ ಅಭಿವೃದ್ಧಿಗೆ ಕಾರಣವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯರಾದ ಡಾ.ಧನಂಜಯ ಸರ್ಜಿ, ಡಿ.ಎಸ್.ಅರುಣಕುಮಾರ್, ಮಾಜಿ ಶಾಸಕ ಮಹಿಮಾ ಪಟೇಲ್ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು. ಈ ಪವಿತ್ರ ಸಮಾರಂಭದಲ್ಲಿ ಕಡೇನಂದಿಹಳ್ಳಿ ರೇವಣಸಿದ್ಧೇಶ್ವರ ಶಿವಾಚಾರ್ಯರು, ತಾವರೆಕೆರೆ ಡಾ.ಅಭಿನವ ಸಿದ್ಧಲಿಂಗ ಶಿವಾಚಾರ್ಯರು, ಹಾರನಹಳ್ಳಿ ಶಿವಯೋಗಿ ಶಿವಾಚಾರ್ಯರು, ಹುಣಸಘಟ್ಟ ಗುರು ಮೂರ್ತಿ ಶಿವಾಚಾರ್ಯರು, ಕಾರ್ಜುವಳ್ಳಿ ಸದಾಶಿವ ಶಿವಾಚಾರ್ಯರು, ನಾಗವಂದ ಶಿವಯೋಗಿ ಶಿವಾನಂದ ಶಿವಾಚಾರ್ಯರು, ನಂದಿಪುರ ನಂದೀಶ್ವರ ಶಿವಾಚಾರ್ಯರು, ಬಳಸೀಗೋಡುಮಠದ ಅಭಿನವ ನೀಲಕಂಠ ಶಿವಾಚಾರ್ಯರು, ಹಣ್ಣೆಮಠದ ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು, ಗೋವಿನಕೋವಿಮಠದ ಹಾಲಸ್ವಾಮಿಗಳು, ಅರಕೆರೆ ಚನ್ನವೀರಸ್ವಾಮಿಗಳು, ಚನ್ನಗಿರಿ ವೀರಶೈವ ಸಮಾಜದ ಅಧ್ಯಕ್ಷ ಗುರುಸಿದ್ಧಯ್ಯನವರು, ಮಾಜಿ ಗೌರವ ಅಧ್ಯಕ್ಷ ಎನ್.ಯು .ರಾಜಶೇಖರಯ್ಯನವರು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು. ಮಠದ ಅಭಿವೃದ್ಧಿಗೆ ಸಹಕರಿಸಿದ ಧರ್ಮಾಭಿಮಾನಿಗಳಿಗೆ ಗೌರವ ಸನ್ಮಾನ ಜರುಗಿತು. ಮಹಾಂತೇಶ ಶಾಸ್ತ್ರಿಗಳು ಪ್ರಾಸ್ತಾವಿಕ ನುಡಿ ಸಲ್ಲಿಸಿದರು. ಅರವಿಂದ ರಿಂದ ಪ್ರಾರ್ಥನೆ, ಶಿವಮೊಗ್ಗದ ಶಾಂತಾ ಆನಂದ ಮತ್ತು ಚನ್ನಗಿರಿ ಶಿಕ್ಷಕಿ ಕವಿತಾ ಹಾಲಸ್ವಾಮಿ ಇವರಿಂದ ನಿರೂಪಣೆ ನಡೆಯಿತು. ಸಮಾರಂಭದ ನಂತರ ಶ್ರೀ ಜಗದ್ಗುರು ಪಂಚಾಚಾರ್ಯ ರಥೋತ್ಸವ ಜರುಗಿ ಅನ್ನದಾಸೋಹ ಜರುಗಿತು.

ಯಲಬುರ್ಗಾ ತಾಲೂಕಿನ ನ್ಯಾಯಾಂಗಕ್ಕೆ ಹೊಸ ಗರಿ; ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳಿಂದ ನೂತನ ನ್ಯಾಯಾಲಯ ಕಟ್ಟಡ ಲೋಕಾರ್ಪಣೆ

ಕೊಪ್ಪಳ ಏ.05-

ಏಕಕಾಲಕ್ಕೆ ನಾಲ್ಕು ನ್ಯಾಯಾಲಯ ನಡೆಯುವ ಸಾಮರ್ಥ್ಯದ ಯಲಬುರ್ಗಾ ತಾಲೂಕಿನ ನೂತನ ನ್ಯಾಯಾಲಯ ಕಟ್ಟಡ ಲೋಕಾರ್ಪಣೆ ಮೂಲಕ ಯಲಬುರ್ಗಾ ತಾಲೂಕಿನಲ್ಲಿ ಏಪ್ರೀಲ್ 04 ಐತಿಹಾಸಿಕ ದಿನವಾಗಿ ದಾಖಲಾಯಿತು.

ಈ ಐತಿಹಾಸಿಕ ಕಾರ್ಯಕ್ರಮ ಹಿನ್ನೆಲೆಯಲ್ಲಿ ಕೊಪ್ಪಳ, ಕುಷ್ಟಗಿ, ಕುಕನೂರ, ರೋಣ ಹಾಗೂ ಗಜೇಂದ್ರಗಡ ಭಾಗದ ವಕೀಲರು, ನಿವೃತ್ತ ವಕೀಲರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನ್ಯಾಯಮೂರ್ತಿಗಳೊಂದಿಗೆ ಗ್ರೂಪ್ ಫೋಟೊ ತೆಗೆಯಿಸಿಕೊಂಡು ಸಂಭ್ರಮಿಸಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.



ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಹಾಗೂ ಹೈಕೋರ್ಟನ ನ್ಯಾಯಮೂರ್ತಿಗಳಾದ ಗೌರವಾನ್ವಿತ ಹಂಚಾಟೆ ಸಂಜೀವ್‌ಕುಮಾರ್ ಅವರೊಂದಿಗೆ ಕುಕನೂರ ಪಟ್ಟಣದ ಮಾರ್ಗವಾಗಿ ಯಲಬುರ್ಗಾ ಪಟ್ಟಣ ಪ್ರವೇಶಿಸಿದ ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಕೊಪ್ಪಳ ಜಿಲ್ಲೆಯ ಆಡಳಿತ ನ್ಯಾಯಾಧೀಶರಾದ ಗೌರವಾನ್ವಿತ ಸಿ.ಎಂ ಪೂಣಚ್ಚ ಅವರು ನ್ಯಾಯಮೂರ್ತಿಗಳು, ಶಾಸಕರು, ನ್ಯಾಯಾಧೀಶರು ಮತ್ತು ವಕೀಲರ ಸಮ್ಮುಖದಲ್ಲಿ ಮೊದಲಿಗೆ ನೂತನ ನ್ಯಾಯಾಲಯ ಅಂಗಳದಲ್ಲಿ ಸಸಿ ನೆಟ್ಟರು. ಬಳಿಕ ರಿಬ್ಬನ್ ಕತ್ತರಿಸುವ ಮೂಲಕ ನೂತನ ಕಟ್ಟಡವನ್ನು ಲೋಕಾರ್ಪಣೆ ಮಾಡಿದರು. ಈ ಮೂಲಕ ಯಲಬುರ್ಗಾ ತಾಲೂಕಿನ ನ್ಯಾಯಾಂಗಕ್ಕೆ ಹೊಸ ಗರಿ ಮೂಡಿತು.

ಇದೆ ವೇಳೆ ನ್ಯಾಯಮೂರ್ತಿಗಳಾದ ಸಿ ಎಂ ಪೂಣಚ್ಚ ಅವರು ವಕೀಲರೊಂದಿಗೆ ನ್ಯಾಯಾಲಯದ ಸಭಾಂಗಣದಲ್ಲಿ ಮತ್ತು ನ್ಯಾಯಾಲಯದ ದ್ವಾರಬಾಗಿಲ ಬಳಿಯಲ್ಲಿ ಗ್ರೂಪ್ ಫೋಟೊದಲ್ಲಿ ಭಾಗಿಯಾದರು.

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಗೌರವಾನ್ವಿತ ಚಂದ್ರಶೇಖರ್ ಸಿ ಅವರು ಪ್ರಾಸ್ತಾವಿಕ ಮಾತನಾಡಿ ಯಲಬುರ್ಗಾ ಪಟ್ಟಣದ ಐತಿಹಾಸಿಕ ಹಿನ್ನೆಲೆ ತಿಳಿಸಿ ಏಪ್ರೀಲ್ 4 ಯಲಬುರ್ಗಾ ತಾಲೂಕಿಗೆ ಐತಿಹಾಸಿಕ ದಿನ ಎಂದು ಬಣ್ಣಿಸಿ ನೂತನ ನ್ಯಾಯಾಲಯ ಕಟ್ಟಡ ಲೋಕಾರ್ಪಣೆಯಾಗಿದ್ದಕ್ಕೆ ಸಂತಷ ವ್ಯಕ್ತಪಡಿಸಿದರು.

ಜಿಲ್ಲಾ ನ್ಯಾಯಾಂಗ ಇಲಾಖೆ, ಲೋಕೋಪಯೋಗಿ ಇಲಾಖೆ ಕೊಪ್ಪಳ ಹಾಗೂ ಬಾರ್ ಅಸೋಸಿಯೇಷನ್ ಯಲಬುರ್ಗಾ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎ.ವಿ. ಕಣವಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಯಲಬುರ್ಗಾ ಜೆ.ಎಂ.ಎಫ್.ಸಿ ಸಂಜಯ್ ಕುಮಾರ್ ಪಾಚಾಪೂರ, ನ್ಯಾಯಾಧೀಶರಾದ ರಂಗಸ್ವಾಮಿ ಜೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ. ರಾಮ್ ಎಲ್. ಅರಸಿದ್ದಿ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಯಲಬುರ್ಗಾ ವಕೀಲರ ಸಂಘದ ಅಧ್ಯಕ್ಷರಾದ ಸುಭಾಷಚಂದ್ರ ಎಸ್. ಹೊಂಬಳ, ಪ್ರಧಾನ ಕಾರ್ಯದರ್ಶಿ ಇ.ಟಿ. ಮಹಾಂತೇಶ ಹಾಗೂ ಉಪಾಧ್ಯಕ್ಷರಾದ ಎಂ.ಎಸ್. ನಾಯ್ಕರ್, ಲೋಕೋಪಯೋಗಿ ಇಲಾಖೆ ಕೊಪ್ಪಳ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಹೇಮಂತ್ ರಾಜ್ ಸೇರಿದಂತೆ ಕೊಪ್ಪಳ ಜಿಲ್ಲೆಯ ಎಲ್ಲಾ ಹಿರಿಯ ಹಾಗೂ ಕಿರಿಯ ವಕೀಲರು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಯಲಬುರ್ಗಾ ಬಾರ್ ಅಸೋಸಿಯೇಷನ್‌ನ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

ಮಹಿಳಾ ಸಬಲೀಕರಣದಲ್ಲಿ ಕಲಬುರಗಿ ಜಿಲ್ಲೆ ಮುಂಚೂಣಿ : ಡಿಸಿ



ಕಲಬುರಗಿ,ಏ.05-

ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಕಲಬುರಗಿ ಜಿಲ್ಲೆಯ ಮಹಿಳೆಯರು ಎತ್ತಿದ ಕೈಯಾಗಿದ್ದು, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳನ್ನು ಪಡೆದು ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಮತ್ತು ಹಕ್ಕುಗಳನ್ನು ಗಳಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್ ಹೇಳಿದರು.

ನಗರದ ವಿದ್ಯಾನಗರದಲ್ಲಿ ಅಕ್ಕಮಹಾದೇವಿ ಮಹಿಳಾ ಟ್ರಸ್ಟ್ ಹಾಗೂ ವಿದ್ಯಾನಗರ ವೆಲ್‌ಫೇರ್ ಸೊಸೈಟಿ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಅಕ್ಕಮಹಾದೇವಿ ಜಯಂತಿ, ಉಪನ್ಯಾಸ ಹಾಗೂ ಸತ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಅನೇಕ ಮಹಿಳಾ ಸಂಘಟನೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ವಾರದಲ್ಲಿ ಎರಡು-ಮೂರು ಸಂಘಟನೆಗಳು ಮಹಿಳಾ ಸಬಲೀಕರಣ ಕುರಿತ ಕಾರ್ಯಕ್ರಮಗಳಿಗೆ ಆಹ್ವಾನ ನೀಡುತ್ತಿರುವುದು ಈ ಚಳವಳಿಯ ಬಲವನ್ನು ತೋರಿಸುತ್ತದೆ ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿಯಾಗಿ ಜಿಲ್ಲೆಯನ್ನು ಆಡಳಿತ ನಡೆಸುತ್ತಿರುವ ಮಹಿಳೆ ನಾನೇ ಇದಕ್ಕೆ ಉದಾಹರಣೆ ಎಂದು ಹೇಳಿದ ಅವರು, ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಪಾಲಕರು ಮುಂದಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ. ಶಿವಲೀಲಾ ಚಟ್ನಳ್ಳಿ ಅವರು ಅಕ್ಕಮಹಾದೇವಿಯವರ ಜೀವನ ಚರಿತ್ರೆ ಹಾಗೂ ವಚನಗಳ ಕುರಿತು ಉಪನ್ಯಾಸ ನೀಡಿದರು. ಅಕ್ಕಮಹಾದೇವಿಯವರು ತಮ್ಮ ಜೀವನದಲ್ಲಿ ಎದುರಿಸಿದ ಕಷ್ಟ-ಸಂಕಷ್ಟಗಳ ಅನುಭವದಿಂದಲೇ ವಚನಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಹೇಳಿದರು.

ಡಾ. ಭಾಗ್ಯಶ್ರೀ ಶರಣಪ್ರಕಾಶ ಪಾಟೀಲ ಸನ್ಮಾನ ಸ್ವೀಕರಿಸಿ ಮಾತನಾಡಿ, 12ನೇ ಶತಮಾನದಲ್ಲಿಯೇ ಅಕ್ಕಮಹಾದೇವಿಯವರು ಕವಿಯಾಗಿ ಮಹಿಳಾ ಲೋಕಕ್ಕೆ ಆದರ್ಶ ವ್ಯಕ್ತಿತ್ವವಾಗಿ ಹೊರಹೊಮ್ಮಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಕ್ಕಮಹಾದೇವಿ ಮಹಿಳಾ ಟ್ರಸ್ಟ್ ಅಧ್ಯಕ್ಷೆ ರತ್ನಮ್ಮ ನಿಂಬೂರ ಅವರು ಸಂಘದ 11ನೇ ವಾರ್ಷಿಕೋತ್ಸವದ ನಿಮಿತ್ತ ನಡೆಸಿದ ಚಟುವಟಿಕೆಗಳ ಕುರಿತು ವಿವರಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಬಡಾವಣೆಗಳ ಮಹಿಳಾ ಸಂಘಟನೆಗಳ ಮುಖ್ಯಸ್ಥರನ್ನು ಸನ್ಮಾನಿಸಲಾಯಿತು.

ರೇಖಾ ಅಂಡಗಿ ಪ್ರಾರ್ಥನೆ ಸಲ್ಲಿಸಿದರು. ಸುರೇಖಾ ಯಾದಗಿರ ಸ್ವಾಗತಿಸಿದರು. ತಾರಾ ಪಾಟೀಲ ವಂದಿಸಿದರು. ಡಾ. ಅನುರಿತಾ ಹಿಂದೊಡ್ಡಿ, ದೇವಿಕಾ ತಂಬಾಕೆ, ಮಧು ಹಿಂದೊಡ್ಡಿ ಕಾರ್ಯಕ್ರಮವನ್ನು ನಿರೂಪಿಸಿ ನಿರ್ವಹಿಸಿದರು. ಶಿವರಾಜ ಅಂಡಗಿ, ಉಮೇಶ ಶೆಟ್ಟಿ ಮತ್ತಿತ್ತರರು ಇದ್ದರು.

7 ರಂದು ವಿವಿಧ ಮಹನೀಯರ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಿದ್ಧತಾ ಸಭೆ

ಬಳ್ಳಾರಿ,ಏ.05-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಏ.20 ರಂದು ಬಸವ ಜಯಂತಿ, ಏ.21 ರಂದು ಶ್ರೀ ಶಂಕರಾಚಾರ್ಯ ಜಯಂತಿ ಹಾಗೂ ಏ.23 ರಂದು ಶ್ರೀ ಭಗೀರಥ ಜಯಂತಿ

ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜಿಸುವ ಕುರಿತು ಚರ್ಚಿಸಲು ಏ.07 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ಏರ್ಪಡಿಸಲಾಗಿದೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಐಶಾರಾಮಿ ಬದುಕಿಗಾಗಿ ಸಾಲದ ಮೊರೆ; ಇಎಂಐ ಕಟ್ಟಲಾಗದೇ ಯುವಜನರ ಪರದಾಟ



ಹಣವನ್ನು ಹೇಗೆ ಉಳಿಸಬೇಕು, ಎಲ್ಲಿ ಹೂಡಿಕೆ ಮಾಡಬೇಕು ಮತ್ತು ಬಡ್ಡಿಯ ಲೆಕ್ಕಾಚಾರ ಹೇಗೆ ಎಂಬ ಅರಿವು ಅನೇಕ ಯುವಕರಲ್ಲಿ ಇರುವುದಿಲ್ಲ. ಸಾಲ ಮಾಡುವುದು ಸುಲಭ, ಆದರೆ ಅದನ್ನು ತೀರಿಸುವುದು ಕಷ್ಟ. ನಿಮ್ಮ ಆದಾಯದ ಶೇ.30ಕ್ಕಿಂತ ಹೆಚ್ಚು ಹಣ ಇಎಂಐಗೆ ಹೋಗುತ್ತಿದ್ದರೆ, ನೀವು ಆರ್ಥಿಕ ಅಪಾಯದಲ್ಲಿದ್ದೀರಿ ಎಂದರ್ಥ.

ಇಂದಿನ ದಿನಗಳಲ್ಲಿ ಯುವಕರು ಸಾಲದ ಸುಳಿಗೆ ಸಿಲುಕಲು ಹತ್ತು ಹಲವು ಕಾರಣಗಳಿವೆ. ಬದಲಾದ ಜೀವನಶೈಲಿ, ತಂತ್ರಜ್ಞಾನದ ಬೆಳವಣಿಗೆ ಮತ್ತು ಆರ್ಥಿಕ ಒತ್ತಡಗಳು ಇದರ ಮೇಲೆ ನೇರ ಪರಿಣಾಮ ಬೀರುತ್ತಿವೆ. ದೇಶದಲ್ಲಿನ ಜನರು ಯಾಕೆ ಸಾಲ ತೆಗೆದುಕೊಳ್ಳುತ್ತಾರೆ, ಯಾವ ವಿಧಾನದ ಮೂಲಕ ಸಾಲ ತೆಗೆದುಕೊಳ್ಳುತ್ತಾರೆ, ಸಾಲದ ಉದ್ದೇಶಗಳೇನು ಎನ್ನುವುದರ ಬಗ್ಗೆ ಬ್ಯಾಂಕೇತರ ಹಣಕಾಸು ಕಂಪನಿ, ಹೋಂ ಕ್ರೆಡಿಟ್ ಭಾರತದಲ್ಲಿನ ಜನರು, ಅದರಲ್ಲೂ ಹೆಚ್ಚಾಗಿ ಯುವ ಸಮುದಾಯ ಹೇಗೆ ಸಾಲ ಮಾಡುತ್ತಾರೆ-2025 ಎಂದು ಸಮೀಕ್ಷೆ ಮಾಡಿದೆ.

ಜೀವನಶೈಲಿ ಮತ್ತು ಸಾಮಾಜಿಕ ಒತ್ತಡ

ಸೋಶಿಯಲ್ ಮೀಡಿಯಾಗಳಲ್ಲಿ ಇತರರ ಐಶಾರಾಮಿ ಜೀವನವನ್ನು ನೋಡಿ, ತಾವೂ ಹಾಗೆಯೇ ಬದುಕಬೇಕು ಎಂಬ ಹಂಬಲದಿಂದ ದುಬಾರಿ ಬಟ್ಟೆ, ವಾಚ್, ಬೈಕ್ ಗಳನ್ನು ಖರೀದಿಸುವುದು ಇತ್ಯಾದಿಯನ್ನು ಒಳಗೊಂಡು ಇತ್ಯಾದಿಗಳ ಖರೀದಿಗಾಗಿ ಐಶಾರಾಮಿ ಬದುಕಿಗೆ ಮೊರೆ ಹೋದಾಗ, ಸಾಲದ ಸುಳಿಗೆ ಸಿಲುಕುತ್ತಾರೆ.

ಗ್ಯಾಜೆಟ್ಸ್ ಮೇಲೆ ಅತಿಯಾದ ವ್ಯಾಮೋಹ

ಪ್ರತಿ ವರ್ಷ ಬಿಡುಗಡೆಯಾಗುವ ಹೊಸ ಮಾಡೆಲ್‌ನ ಐಫೋನ್ ಅಥವಾ ದುಬಾರಿ ಲ್ಯಾಪ್‌ಟಾಪ್‌ಗಳನ್ನು ಹೊಂದಲು ಇಎಂಐ ಮೊರೆ ಹೋಗುತ್ತಾರೆ.

ಸುಲಭವಾಗಿ ಸಾಲ ನೀಡುವ ಅಪ್ಲಿಕೇಶನ್‌ಗಳು

ಇನ್‌ಸ್ಟಾಂಟ್ ಲೋನ್ ಆಪ್ಸ್ ಎಂದು ನಾವಿದನ್ನು ಕರೆಯುತ್ತೇವೆ. ಮೊಬೈಲ್‌ನಲ್ಲಿ ಕೆಲವೇ ನಿಮಿಷಗಳಲ್ಲಿ ಸಾಲ ನೀಡುವ ನೂರಾರು ಆಪ್‌ಗಳಿವೆ. ಯಾವುದೇ ದಾಖಲೆಗಳಿಲ್ಲದೆ ಹಣ ಸಿಗುವುದರಿಂದ, ಅದರ ಬಡ್ಡಿ ದರವನ್ನು ಗಮನಿಸದೆ ಯುವಕರು ಸಾಲ ಮಾಡುತ್ತಾರೆ. ಇನ್ನು, , ''ಈಗ ಖರೀದಿಸಿ, ನಂತರ ಪಾವತಿಸಿ'' ಎನ್ನುವ ಆಕರ್ಷಕ ಆಫರ್ ಗಳು ಅಗತ್ಯವಿಲ್ಲದಿದ್ದರೂ ವಸ್ತುಗಳನ್ನು ಖರೀದಿಸುವಂತೆ ಪ್ರೇರೇಪಿಸುತ್ತವೆ.

ಶಿಕ್ಷಣ ಮತ್ತು ವೃತ್ತಿ ಬೆಳವಣಿಗೆ

ವಿದೇಶದಲ್ಲಿ ಓದಲು ಅಥವಾ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪದವಿ ಪಡೆಯಲು. ಅಲ್ಲಿ ಶಿಕ್ಷಣ ಅಥವಾ ಪದವಿ ಪಡೆದರೆ ಮಾತ್ರ ಒಳ್ಳೆಯ ಉದ್ಯೋಗ ದೊರೆಯುತ್ತದೆ ಎನ್ನುವ ಪೂರ್ವಾಗ್ರಹದಿಂದ ಭಾರಿ ಮೊತ್ತದ ಎಜುಕೇಶನ್ ಲೋನ್ ಪಡೆಯುವುದು, ಸಾಲ ಕಟ್ಟುವುದಕ್ಕೆ ಪರದಾಡುವುದು ಯುವಕರ ನಿತ್ಯದ ಜೀವನಶೈಲಿ ಎಂಬಂತಾಗಿದೆ.

ಕೌಶಲ್ಯ ಅಭಿವೃದ್ಧಿಯನ್ನು ವೃದ್ಧಿಸಿಕೊಳ್ಳುವುದಕ್ಕೆ ಹೊಸ ಕೋರ್ಸ್‌ಗಳನ್ನು ಕಲಿಯಲು ಅಥವಾ ಸ್ವಂತ ಉದ್ಯಮ ಆರಂಭಿಸಲು ಯುವಕರು ಸಾಲದ ಮೊರೆ ಹೋಗುತ್ತಿದ್ದಾರೆ.

ಆರ್ಥಿಕ ಅಸ್ಥಿರತೆ ಮತ್ತು ಹಣದುಬ್ಬರ

ಇದು ಯುವಕರನ್ನು ಬಹಳ ದೊಡ್ಡ ಮಟ್ಟದಲ್ಲಿ ಕಾಡುತ್ತಿರುವ ಸಮಸ್ಯೆ, ಕಡಿಮೆ ಸಂಬಳ ಹೆಚ್ಚಿನ ಖರ್ಚು ಯುವಕರ ಜೀವನಶೈಲಿಯಾಗಿ ಬಿಟ್ಟಿದೆ. ನಗರ ಪ್ರದೇಶಗಳಲ್ಲಿ ವಾಸಿಸುವ ಯುವಕರಿಗೆ ಬರುವ ಸಂಬಳಕ್ಕಿಂತ ಮನೆ ಬಾಡಿಗೆ, ಸಾರಿಗೆ ಮತ್ತು ಊಟ ತಿಂಡಿಗಳ ಖರ್ಚುಗಳೇ ಹೆಚ್ಚಾಗಿರುತ್ತವೆ. ತಿಂಗಳ ಕೊನೆಯಲ್ಲಿ ಹಣದ ಕೊರತೆಯಾದಾಗ ಕ್ರೆಡಿಟ್ ಕಾರ್ಡ್ ಅಥವಾ ಸಾಲದ ಮೊರೆ ಹೋಗುತ್ತಾರೆ. ಇನ್ನು, ತುರ್ತು ಅಗತ್ಯತೆಗಳು ಎದುರಾದಾಗಲಂತೂ, ಸಾಲವೇ ಗತಿ ಎನ್ನುವಷ್ಟರ ಮಟ್ಟಿಗೆ ಅವರ ಜೀವನಶೈಲಿ ಬದಲಾಗಿದೆ. ಉಳಿತಾಯದ ಕಾನ್ಸೆಪ್ಟ್ ಯುವಕರ ಬದುಕಿನಲ್ಲಿ ಇಲ್ಲದಾಗಿದೆ. ವೈದ್ಯಕೀಯ ತುರ್ತು ಪರಿಸ್ಥಿತಿಗಳು ಅಥವಾ ಮನೆಯಲ್ಲಿನ ಹಠಾತ್ ಖರ್ಚುಗಳನ್ನು ನಿಭಾಯಿಸಲು ಉಳಿತಾಯ ಇಲ್ಲದಿದ್ದಾಗ ಸಾಲ ಮಾಡುವುದು ಅನಿವಾರ್ಯವಾಗುತ್ತದೆ.

ಆರ್ಥಿಕ ಸಾಕ್ಷರತೆಯ ಕೊರತೆ

ಹಣವನ್ನು ಹೇಗೆ ಉಳಿಸಬೇಕು, ಎಲ್ಲಿ ಹೂಡಿಕೆ ಮಾಡಬೇಕು ಮತ್ತು ಬಡ್ಡಿಯ ಲೆಕ್ಕಾಚಾರ ಹೇಗೆ ಎಂಬ ಅರಿವು ಅನೇಕ ಯುವಕರಲ್ಲಿ ಇರುವುದಿಲ್ಲ. ಸಾಲ ಮಾಡುವುದು ಸುಲಭ, ಆದರೆ ಅದನ್ನು ತೀರಿಸುವುದು ಕಷ್ಟ. ನಿಮ್ಮ ಆದಾಯದ ಶೇ.30ಕ್ಕಿಂತ ಹೆಚ್ಚು ಹಣ ಇಎಂಐಗೆ ಹೋಗುತ್ತಿದ್ದರೆ, ನೀವು ಆರ್ಥಿಕ ಅಪಾಯದಲ್ಲಿದ್ದೀರಿ ಎಂದರ್ಥ. ಬ್ಯಾಂಕೇತರ ಹಣಕಾಸು ಕಂಪನಿ, ಹೋಂ ಕ್ರೆಡಿಟ್ ಭಾರತದಲ್ಲಿನ ಜನರು ಹೇಗೆ ಸಾಲ ಮಾಡುತ್ತಾರೆ ಎಂದು ನಡೆಸಿದ ಸಮೀಕ್ಷೆಯನ್ನು ಗಮನಿಸಿದರೇ, ನಿಜಕ್ಕೂ ಆತಂಕ ಸೃಷ್ಟಿಯಾಗುತ್ತದೆ.

ಜನರು (ಹೆಚ್ಚಾಗಿ ಯುವಕರು) ಸಾಲ ಮಾಡುವುದಕ್ಕೆ ಕಾರಣಗಳೇನು?

ಸ್ಮಾರ್ಟ್ ಫೋನ್ ಅಥವಾ ಗೃಹೋಪಕರಣಗಳ ಖರೀದಿಗೆ ಶೇ.46
ಹೊಸ ವ್ಯವಹಾರ ಆರಂಭಿಸಲು/ವಿಸ್ತರಿಸುವುದಕ್ಕೆ ಶೇ.25
ಮನೆಯ ನವೀಕರಣ/ನಿರ್ಮಾಣ : ಶೇ.12
ಶಿಕ್ಷಣ: ಶೇ.4
ದ್ವಿಚಕ್ರ ವಾಹನ/ಕಾರು ಖರೀದಿ: ಶೇ.4
ವೈದ್ಯಕೀಯ ತುರ್ತು:ಶೇ.4
ಮನೆ/ಆಸ್ತಿ ಖರೀದಿ: ಶೇ.2

ತಮಿಳುನಾಡು ಹೊಸ ಚುನಾವಣಾ ಅಫಿಡವಿಟ್‌ನಲ್ಲಿ ಎರಡು ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳ ಉಲ್ಲೇಖಿಸಿದ ವಿಜಯ್

ತಮಿಳುನಾಡು ಚುನಾವಣೆಗೂ ಮುನ್ನ ಟಿವಿಕೆ ಮುಖ್ಯಸ್ಥ, ನಟ ವಿಜಯ್ ಹೊಸ ಅಫಿಡವಿಟ್ ಸಲ್ಲಿಸಿದ್ದಾರೆ. ಅದರಲ್ಲಿ ಈ ಹಿಂದೆ ಘೋಷಿಸದ ಎರಡು ಕ್ರಿಮಿನಲ್ ಪ್ರಕರಣಗಳನ್ನು ಉಲ್ಲೇಖಿಸದ್ದಾರೆ.

ಈ ಹಿಂದೆ ಮಾರ್ಚ್ 30ರಂದು ಮೊದಲನೆಯ ಅಫಿಡವಿಟ್ ಸಲ್ಲಿಸಲಾಗಿತ್ತು. ಇದೀಗ ಏಪ್ರಿಲ್ 4ರಂದು ಹೊಸ ಅಫಿಡವಿಟ್ ಸಲ್ಲಿಸಿದ್ದಾರೆ. ಅದರಲ್ಲಿ ಈ ಹಿಂದಿನ ಅಫಿಡವಿಟ್‌ನಲ್ಲಿ ಸೇರಿಸದ ಚೆನ್ನೈ ಮತ್ತು ಮಧುರೈನಲ್ಲಿ ದಾಖಲಾಗಿರುವ ಎರಡು ಪ್ರಕರಣಗಳನ್ನು ಉಲ್ಲೇಖಿಸಿದ್ದಾರೆ.

ಚುನಾವಣಾ ಪ್ರಚಾರದ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡಿದ ಆರೋಪದ ಮೇಲೆ ಚೆನ್ನೈನ ಕೆ 5 ಪೆರವಲ್ಲೂರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಬಗ್ಗೆ ನನಗೆ ಏಪ್ರಿಲ್ 2ರಂದು ಸಾಮಾಜಿಕ ಮಾಧ್ಯಮದ ಮೂಲಕ ಮಾಹಿತಿ ತಿಳಿದುಬಂದಿದೆ ಎಂದು ಹೊಸ ಅಫಿಡವಿಟ್‌ನಲ್ಲಿ ವಿಜಯ್ ತಿಳಿಸಿದ್ದಾರೆ.

ಹಾಗೆಯೇ ಮಧುರೈ ಜಿಲ್ಲೆಯ ಕೂಡಕೋವಿಲ್ ಪೊಲೀಸ್ ಠಾಣೆಯಿಂದ 2025ರಲ್ಲಿ ಇನ್ನೊಂದು ಎಫ್‌ಐಆರ್ ದಾಖಲಾಗಿದೆ. 2025ರ ಆಗಸ್ಟ್ 21ರಂದು ಟಿವಿಕೆಯ ಎರಡನೇ ರಾಜ್ಯ ಮಟ್ಟದ ಬೃಹತ್ ಸಮ್ಮೇಳನ ನಡೆದಿತ್ತು. ಈ ವೇಳೆ ಶರತ್‌ಕುಮಾರ್ ಎಂಬ ಅಭಿಮಾನಿಯನ್ನು ಸುಮಾರು 10 ಮಂದಿ ಬೌನ್ಸರ್‌ಗಳು ತಳ್ಳಾಡಿ ಹಲ್ಲೆ ಮಾಡಿದ್ದರು ಎಂದು ದೂರು ದಾಖಲಾಗಿತ್ತು. ಆದರೆ ಈ ಪ್ರಕರಣದಲ್ಲಿ ಇನ್ನೂ ವಿಜಯ್ ಅವರಿಗೆ ಇನ್ನೂ ಸಮನ್ಸ್ ಬಂದಿಲ್ಲ.

ಎರಡು ಕ್ರಿಮಿನಲ್ ಪ್ರಕರಣಗಳನ್ನು ಹೊಸ ಅಫಿಡವಿಟ್‌ನಲ್ಲಿ ಸೇರಿಸಿದ್ದರೂ ಉಳಿದಂತೆ ಎಲ್ಲ ಮಾಹಿತಿ, ಹಣಕಾಸು ಘೋಷಣೆ ಸ್ಥಿರವಾಗಿದೆ. ಹೊಸ ಅಫಿಡವಿಟ್‌ನಲ್ಲಿ ವಿಜಯ್ ಅವರ ಚರಾಸ್ತಿಗಳ ಮೌಲ್ಯ ಸುಮಾರು 410.59 ಕೋಟಿ ರೂ.ಗಳಾಗಿದ್ದು, ಈ ಹಿಂದೆ ಘೋಷಿಸಲಾದ 404.58 ಕೋಟಿ ರೂ.ಗಳಿಗೆ ಹೋಲಿಸಿದರೆ ಕೊಂಚ ಅಧಿಕವಾಗಿದೆ. ಇದರಲ್ಲಿ 15 ಲಕ್ಷ ರೂ. ಮೌಲ್ಯದ ಬೆಳ್ಳಿ ವಸ್ತುಗಳು ಮತ್ತು 1.20 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ 883 ಗ್ರಾಂ ಚಿನ್ನಾಭರಣಗಳು ಸೇರಿವೆ.

ನೀಲಂಕರೈ ಮತ್ತು ಸಾಲಿಗ್ರಾಮದಂತಹ ಸ್ಥಳಗಳಲ್ಲಿನ ವಾಣಿಜ್ಯ ಮತ್ತು ವಸತಿ ಕಟ್ಟಡಗಳು ಸೇರಿದಂತೆ ಅವರ ಸ್ಥಿರ ಆಸ್ತಿಗಳ ಒಟ್ಟು ಪ್ರಸ್ತುತ ಮಾರುಕಟ್ಟೆ ಮೌಲ್ಯವು 220.15 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ. ಟಿವಿಕೆ ನಾಯಕ 2024-2025ರ ಹಣಕಾಸು ವರ್ಷಕ್ಕೆ ಒಟ್ಟು 184.53 ಕೋಟಿ ರೂ.ಗಳ ಆದಾಯವನ್ನು ಘೋಷಿಸಿದ್ದಾರೆ. ಸುಮಾರು 3.44 ಕೋಟಿ ರೂ.ಗಳ ಬಾಕಿ ಇರುವ ಆದಾಯ ತೆರಿಗೆಯ ಬಗ್ಗೆಯೂ ಉಲ್ಲೇಖಿಸಿದ್ದಾರೆ.

ತ್ರಿಭಾಷಾ ಸೂತ್ರ ಮತ್ತು ದೇಶದ ಏಕತೆ – ಒಂದು ಐತಿಹಾಸಿಕ ಸುಳ್ಳು



ಹಿಂದಿ ಹೇರಿಕೆಯ ಈ ಕಪಟ ರಾಜಕಾರಣವನ್ನು ಕರ್ನಾಟಕದ ಜನರು ಖಂಡಿಸಬೇಕು. ತ್ರಿಭಾಷಾ ಸೂತ್ರದ ಹೆಸರಿನಲ್ಲಿ ನಮ್ಮ ಮಕ್ಕಳ ಮೇಲೆ ಹಿಂದಿ ಭಾರ ಹೇರಲು ಬಂದವರನ್ನು ತಿರಸ್ಕರಿಸಿ. ನಮ್ಮ ಭಾಷೆ, ನಮ್ಮ ಸಂಸ್ಕೃತಿ, ನಮ್ಮ ಗೌರವವನ್ನು ರಕ್ಷಿಸಲು ಇದು ಸಮಯ. ಹಿಂದಿ-ಹಿಂದೂ-ಹಿಂದೂಸ್ಥಾನ್‌ನ ಹುನ್ನಾರಕ್ಕೆ ದೇಶ ಬಲಿಯಾಗಬಾರದು.

ಕರ್ನಾಟಕ ಸರ್ಕಾರವು ಎಸ್‌ಎಸ್‌ಎಲ್‌ಸಿ ಹಂತದಲ್ಲಿ ತೃತೀಯ ಭಾಷೆಯಾಗಿ ಹಿಂದಿಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕೆಂಬ ನಿಯಮವನ್ನು ತೆಗೆದುಹಾಕಿದೆ. ಇದರ ಬದಲಿಗೆ ತೃತೀಯ ಭಾಷೆಗೆ ಗ್ರೇಡಿಂಗ್ ನೀಡಲು ತೀರ್ಮಾನಿಸಿದೆ. ಈ ತೀರ್ಮಾನವನ್ನು ಬಹುತೇಕರು ಒಪ್ಪಿಕೊಂಡಿದ್ದಾರೆ. ಕೆಲವರು ಮಾತ್ರ ವಿರೋಧ ಮಾಡುತ್ತಿದ್ದಾರೆ. ಇದರ ಜೊತೆಗೆ ತ್ರಿಭಾಷಾ ಸೂತ್ರ ಎಂಬುದು ದೇಶದ ಏಕತೆಗೆ ಅಗತ್ಯ ಎಂಬ ರೀತಿಯ ವಾದವನ್ನು ಮುಂದಿಡುತ್ತಿದ್ದಾರೆ. ಈ ವಾದ ನಿಜಕ್ಕೂ ಸರಿಯಾಗಿದೆಯಾ? ಇದರಲ್ಲಿ ಏನಾದರೂ ತರ್ಕವಿದೆಯಾ? ಹಿಂದಿ ಭಾಷೆ ಗೊತ್ತಿಲ್ಲದಿದ್ದರೆ ಕನ್ನಡಿಗರು ಕಷ್ಟ ಅನುಭವಿಸಬೇಕಾ? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕಂಡುಕೊಳ್ಳಬೇಕಿದೆ.

ಭಾರತ ಎಂಬುದು ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶ. ವಿವಿಧ ಜನರ ಭಾಷೆ, ಸಂಸ್ಕೃತಿ, ವೇಷ-ಭೂಷಣ, ಆಹಾರ ಪದ್ಧತಿ ಎಲ್ಲವನ್ನೂ ಒಳಗೊಂಡು ಏಕತೆಯನ್ನು ನೋಡುತ್ತೇವೆ. ಈಗ ಬಂದಿರುವ ಪ್ರಶ್ನೆ: ಹಿಂದಿಯನ್ನು ನಮ್ಮ ಶಿಕ್ಷಣದಿಂದ ತೆಗೆದರೆ ಏನಾಗುತ್ತದೆ? ತ್ರಿಭಾಷಾ ಸೂತ್ರವೇ ಇಲ್ಲದ ಉತ್ತರ ಭಾರತದ ರಾಜ್ಯಗಳು ಏನನ್ನು ಕಳೆದುಕೊಂಡಿವೆ? ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡ ಕರ್ನಾಟಕ ಏನು ಸಾಧಿಸಿದೆ? ಉತ್ತರದ ರಾಜ್ಯಗಳು ದಕ್ಷಿಣದ ಭಾಷೆಗಳನ್ನು ಏಕೆ ಕಲಿಯುವುದೇ ಇಲ್ಲ? ಹೀಗೆ ಅನೇಕ ಪ್ರಶ್ನೆಗಳನ್ನು ಕರ್ನಾಟಕದಲ್ಲಿ ಹಿಂದಿ ಬೇಕು ಎನ್ನುವವರಿಗೆ ಕೇಳಬೇಕು.

ಮೊದಲನೆಯದಾಗಿ, ತ್ರಿಭಾಷಾ ಸೂತ್ರ ಎಂಬುದೇ ಒಂದು ಐತಿಹಾಸಿಕ ಸುಳ್ಳು. 2014ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಬಂದ ನಂತರ ಹಿಂದಿ ಭಾಷೆಯನ್ನು ತೀವ್ರವಾಗಿ ಬಳಸುತ್ತಿದೆ ಮತ್ತು ಬಳಸಲು ಉತ್ತೇಜನ ನೀಡುತ್ತಿದೆ. ಹಿಂದಿ ಭಾಷೆಯನ್ನು ಬಳಸಬೇಕೆಂಬ ಸುತ್ತೋಲೆಗಳು, ಕಚೇರಿಯಲ್ಲಿ ಟಿಪ್ಪಣಿಗಳು ಮತ್ತು ಆದೇಶಗಳನ್ನು ಕಳುಹಿಸಿದೆ. ಇದರ ಪರಿಣಾಮವಾಗಿ ಹೆಚ್ಚು ಸದ್ದು ಮಾಡದೆ ಅನೇಕ ಕಡೆಗಳಲ್ಲಿ ಹಿಂದಿ ವಾಮಮಾರ್ಗದ ಮೂಲಕ ಬಂದು ಸೇರಿಕೊಂಡಿದೆ. ದ್ವಿಭಾಷಾ ನೀತಿಯನ್ನು ಅಳವಡಿಸಿಕೊಂಡಿರುವ ತಮಿಳುನಾಡು ಸೇರಿದಂತೆ, ತ್ರಿಭಾಷಾ ನೀತಿಯನ್ನು ಅನುಸರಿಸುತ್ತಿರುವ ಕರ್ನಾಟಕದ ಕೇಂದ್ರೀಯ ಸಂಸ್ಥೆಗಳಾದ ಬ್ಯಾಂಕ್, ಅಂಚೆ ಕಚೇರಿ, ರೈಲ್ವೆ ಇಲಾಖೆ, ವಿಮಾನ ನಿಲ್ದಾಣ, ರಕ್ಷಣಾ ಇಲಾಖೆ ಹೀಗೆ ಕೇಂದ್ರದ ಅಡಿಯಲ್ಲಿ ಬರುವ ಎಲ್ಲ ಕಡೆಗಳಲ್ಲಿಯೂ ಹಿಂದಿಯನ್ನು ವ್ಯಾಪಕವಾಗಿ ವಿಸ್ತರಿಸಲು ಕೇಂದ್ರ ಸರ್ಕಾರ ಹವಣಿಸಿದೆ. ಅದಕ್ಕೆ ಪೂರಕವೆಂಬಂತೆ ಕೇಂದ್ರ ಸರ್ಕಾರ ಜಾರಿಗೆ ತಂದ ಎಲ್ಲಾ ಯೋಜನೆಗಳಲ್ಲಿಯೂ ಹಿಂದಿ ಭಾಷೆಯ ಪದವನ್ನು ಸೇರಿಸಿದೆ. ಉದಾಹರಣೆಗೆ ಅಟಲ್ ಪೆನ್ಷನ್, ಜನ್‌ಧನ್ ಯೋಜನೆ, ಜನೌಷಧಿ ಕೇಂದ್ರ, ಕಿಸಾನ್ ಸಮ್ಮಾನ್, ನಾರೀ ಸಮ್ಮಾನ್, ಜಲಜೀವನ್ ಮಿಷನ್ ಹೀಗೆ.

ಈಗ ರಾಜ್ಯ ಸರ್ಕಾರವು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿಯನ್ನು ಅಂಕಗಳಿಗೆ ಪರಿಗಣಿಸುವುದಿಲ್ಲ, ಬದಲಿಗೆ ಗ್ರೇಡಿಂಗ್ ಆಗಿ ಪರಿಗಣಿಸುವುದು ಎಂದು ತೀರ್ಮಾನಿಸಿದೆ. ಆದರೆ ಬಿಜೆಪಿ ಪಕ್ಷದ ಅನೇಕರು ಇದನ್ನು ಭಾರತದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ತರುವ ನೀತಿ ಎಂದು ಟೀಕಿಸುತ್ತಿದ್ದಾರೆ. ರಾಜಕೀಯವಾಗಿ ಮಾತ್ರವಲ್ಲದೆ ಸೈದ್ಧಾಂತಿಕವಾಗಿಯೂ ವಿರೋಧಿಸುತ್ತಿದ್ದಾರೆ. ರಾಜ್ಯ ಸರ್ಕಾರದ ಈ ತೀರ್ಮಾನವು ಮಕ್ಕಳ ಮೇಲಿರುವ ಹಿಂದಿ ಕಡ್ಡಾಯ ಕಲಿಕೆಯ ಭಾರವನ್ನು ಕಡಿಮೆ ಮಾಡಿದೆ. ಆದರೆ ಬಿಜೆಪಿಯವರ ವಾದ ಮಾತ್ರ ಹಿಂದಿ-ಹಿಂದೂ-ಹಿಂದೂಸ್ಥಾನ್ ಎಂಬ ಸಂವಿಧಾನ ವಿರೋಧಿ ರಾಜಕಾರಣದ ಭಾಗವೇ ಆಗಿದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಹರಿದು ಹಂಚಿ ಹೋಗಿದ್ದ ರಾಜ್ಯಗಳ ಪುನರ್ ವಿಂಗಡಣೆ ಕಾರ್ಯ ಆರಂಭವಾಯಿತು. 1956ರಲ್ಲಿ ಆಂಧ್ರಪ್ರದೇಶದ ಪೊಟ್ಟಿ ಶ್ರೀರಾಮುಲು ಅವರು ಆಮರಣಾಂತ ಉಪವಾಸ ಮಾಡಿ ಭಾಷಾವಾರು ರಾಜ್ಯವಾಗಿ ಆಂಧ್ರಪ್ರದೇಶ ಸ್ಥಾಪನೆಗೆ ಕಾರಣರಾದರು. ಅದೇ ವರ್ಷ ಕನ್ನಡ ಭಾಷೆ ಮಾತನಾಡುವ ಜನರಿಂದ ಮೈಸೂರು ರಾಜ್ಯ ಸ್ಥಾಪನೆಯಾಯಿತು. ಅದೇ ರೀತಿಯಲ್ಲಿ ತಮಿಳುನಾಡು, ಕೇರಳ, ಮಹಾರಾಷ್ಟ್ರ, ರಾಜಸ್ಥಾನ ಹೀಗೆ ಇಡೀ ಭಾರತವೇ ಭಾಷೆಯ ಆಧಾರದ ಮೇಲೆ ಸ್ಥಾಪನೆಯಾಯಿತು.

ಸಂವಿಧಾನ ರಚನಾ ಸಭೆಯಲ್ಲಿ ರಾಷ್ಟ್ರಕ್ಕೆ ಒಂದು ಭಾಷೆ ಬೇಕು ಎಂಬ ಬಗ್ಗೆ ಚರ್ಚೆ ನಡೆದಾಗಲೂ ಅನೇಕ ವಿರೋಧಗಳು ಬಂದವು. ಎಲ್ಲರನ್ನು ಕೂಡಿಸುವ ಭಾಷೆಯಾಗಿ ಇಂಗ್ಲಿಷ್ ಅನ್ನು ಮತ್ತು ಆಯಾ ರಾಜ್ಯಗಳ ಭಾಷೆಗಳನ್ನೇ ಮುಖ್ಯವೆಂದು ಭಾವಿಸಲಾಯಿತು. ಸಂವಿಧಾನದ 8ನೇ ಪರಿಚ್ಛೇದದಲ್ಲಿ ಕನ್ನಡವೂ ಸೇರಿದಂತೆ 22 ಪ್ರಾದೇಶಿಕ ಭಾಷೆಗಳಿಗೆ ಕಾನೂನಿನ ಮಾನ್ಯತೆ ನೀಡಲಾಗಿದೆ. ಅಸ್ಸಾಮಿ, ಬಂಗಾಳಿ, ಬೋಡೊ, ಡೋಗ್ರಿ, ಗುಜರಾತಿ, ಹಿಂದಿ, ಕನ್ನಡ, ಕಾಶ್ಮೀರಿ, ಕೊಂಕಣಿ, ಮೈಥಿಲಿ, ಮಲಯಾಳಂ, ಮಣಿಪುರಿ, ಮರಾಠಿ, ನೇಪಾಳಿ, ಒಡಿಯಾ, ಪಂಜಾಬಿ, ಸಂಸ್ಕೃತ, ಸಂಥಾಲಿ, ಸಿಂಧಿ, ತಮಿಳು, ತೆಲುಗು ಮತ್ತು ಉರ್ದು. ಬಿಜೆಪಿಯವರು ಹೇಳುವ ಒಂದು ಭಾಷೆಯ ಸಿದ್ಧಾಂತದಿಂದ ಇಷ್ಟು ಭಾಷೆಗಳನ್ನು ಹೊರಗೆ ಹಾಕಬೇಕಾಗುತ್ತದೆ. ಇವೆಲ್ಲವೂ ಸೇರಿದಂತೆ ಹಿಂದಿಯೂ ಸಹ ಕೇವಲ ಒಂದು ಪ್ರಾದೇಶಿಕ ಭಾಷೆಯಾಗಿ ಮಾತ್ರ ನೋಡಬೇಕು.

ನಮ್ಮ ನಾಡಿನ ಮಕ್ಕಳು ಕನ್ನಡದ ಜೊತೆ ಇಡೀ ಜಗತ್ತಿಗೆ ಕೊಂಡಿಯಾಗಿರುವ ಇಂಗ್ಲಿಷ್ ಅನ್ನು ಕಲಿಯುವುದು ಸೂಕ್ತವೇ ಹೊರತು, ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದು ಎಷ್ಟು ಸರಿ? ಆರ್‌ಎಸ್‌ಎಸ್ ಮತ್ತು ಬಿಜೆಪಿ ಹೇಳುವ ಒಂದು ಎನ್ನುವ ಸಿದ್ಧಾಂತದ ಹುನ್ನಾರವೇ ತ್ರಿಭಾಷಾ ನೀತಿ. ಬಿಜೆಪಿ ಚಿಂತನೆಗಳ ಪಿತಾಮಹನಾದ ವಿ.ಡಿ. ಸಾವರ್ಕರ್ ಅವರು 1923ರಲ್ಲಿ ಬರೆದ '' '' ಪುಸ್ತಕದಲ್ಲಿ ಸಂಸ್ಕೃತವನ್ನು ಭಾರತದ ಸಂಸ್ಕೃತಿಯ ಏಕಮಾತ್ರ ವಾಹಕ ಎಂದು ಕರೆದಿದ್ದರು. ಆದರೆ, ಈಗ ಎಲ್ಲರೂ ಸಂಸ್ಕೃತ ಕಲಿಯುವುದು ಕಷ್ಟವಾದ್ದರಿಂದ, ಸಂಸ್ಕೃತದ ಪದಗಳನ್ನು ಒಳಗೊಂಡಿರುವ ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದು ಭಾರತವನ್ನು ಬ್ರಾಹ್ಮಣೀಕರಿಸುವ ಮತ್ತೊಂದು ಹುನ್ನಾರ. ಅದಕ್ಕೆ ಪೂರಕವಾಗಿ 2020ರಲ್ಲಿ ಬಿಜೆಪಿ ಸರ್ಕಾರ ಜಾರಿಗೆ ತಂದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿಯೂ ಅಂಗನವಾಡಿ ಹಂತದಿಂದಲೇ ಮಕ್ಕಳಿಗೆ ಆಡುಭಾಷೆಯಲ್ಲಿ ಸಂಸ್ಕೃತ ಪದಗಳನ್ನು ಪರಿಚಯಿಸಬೇಕೆಂದು ಶಿಫಾರಸ್ಸು ಮಾಡಲಾಗಿತ್ತು

ಭಾರತವನ್ನು ಒಂದೇ ಎಂಬ ಪರಿಕಲ್ಪನೆಯಲ್ಲಿ ಗ್ರಹಿಸುವುದು ತಪ್ಪು. ಸಂವಿಧಾನದಲ್ಲಿ ಉಲ್ಲೇಖಿತವಾದ 22 ಭಾಷೆಗಳ ಮೇಲೆಯೇ ಈ ರಾಷ್ಟ್ರ ರೂಪುಗೊಂಡಿದೆ. ಆ ಎಲ್ಲಾ ಭಾಷೆಗಳನ್ನು ಕೋಟಿಗಟ್ಟಲೆ ಜನರು ಮಾತನಾಡುತ್ತಾರೆ. ಕರ್ನಾಟಕದಲ್ಲಿ ಮಾತ್ರ ಕನ್ನಡವನ್ನು ಸುಮಾರು ಐದು ಕೋಟಿಗೂ ಹೆಚ್ಚು ಜನರು ಮಾತನಾಡುತ್ತಾರೆ. ಹಿಂದಿಯನ್ನು ಪ್ರಮುಖ ಭಾಷೆ ಮಾಡುವುದಾದರೆ ಸಂವಿಧಾನದಲ್ಲಿರುವ ಎಲ್ಲಾ ಭಾಷೆಗಳು ಸತ್ತು ಹೋಗುತ್ತವೆ. ಆ ಭಾಷೆಗಳ ಜೊತೆಗೆ ಅವುಗಳ ಸಂಸ್ಕೃತಿ ಮತ್ತು ಇತಿಹಾಸವೂ ನಾಶವಾಗುತ್ತದೆ.

ಹಿಂದಿ-ಹಿಂದೂ-ಹಿಂದೂಸ್ಥಾನ್ ಅನ್ನುವ ಹುನ್ನಾರದ ಭಾಗವೇ ಈ ಹಿಂದಿ ಹೇರಿಕೆ. ಹಿಂದಿಯನ್ನು ಅತಿ ಹೆಚ್ಚು ಜನರು ಮಾತನಾಡುವ ಭಾಷೆ ಎಂದು ಸುಳ್ಳು ಬಿಂಬಿಸಲಾಗುತ್ತಿದೆ. ಮುಖ್ಯವಾಗಿ, ಹಿಂದಿಯನ್ನು ರಾಷ್ಟ್ರಭಾಷೆಯೆಂದು ಘೋಷಿಸಿ ಎಲ್ಲಾ ವ್ಯಾವಹಾರದ ಸರಕುಗಳ ಮೇಲೆ ಕಡ್ಡಾಯವಾಗಿ ಹಿಂದಿಯಲ್ಲಿ ವಿವರಗಳನ್ನು ನಮೂದಿಸಬೇಕೆಂದು ಆಗ್ರಹಿಸಿ 2010ರಲ್ಲಿ ಸುರೇಶ್ ಕಚ್ಚಡಿಯಾ ಅವರು ಗುಜರಾತ್ ಹೈಕೋರ್ಟಿನಲ್ಲಿ ದಾವೆ ಸಲ್ಲಿಸಿದ್ದರು. ಆದರೆ, ಗುಜರಾತ್ ಹೈಕೋರ್ಟ್ ಹಿಂದಿಯು ಭಾರತದ ಒಂದು ಭಾಷೆಯೇ ಹೊರತು ರಾಷ್ಟ್ರಭಾಷೆಯಲ್ಲ ಎಂದೂ, ಸಂವಿಧಾನದಲ್ಲಿ ರಾಷ್ಟ್ರಭಾಷೆ ಎಂಬ ವರ್ಗೀಕರಣವೇ ಇಲ್ಲ ಎಂದೂ ಸ್ಪಷ್ಟ ತೀರ್ಮಾನ ನೀಡಿದೆ.

ಆರ್‌ಎಸ್‌ಎಸ್ ಮತ್ತು ಬಿಜೆಪಿಯವರ ಮತ್ತೊಂದು ವಾದವೆಂದರೆ ಹಿಂದಿಯನ್ನು ಅತಿ ಹೆಚ್ಚು ಜನರು ಬಳಸುತ್ತಾರೆ ಎಂಬುದು. 2011ರ ಭಾಷಾ ಗಣತಿ ಪ್ರಕಾರ ಇಡೀ ದೇಶದಲ್ಲಿ ಹಿಂದಿ ಮಾತನಾಡುವವರ ಸಂಖ್ಯೆ ಶೇ.43ರಷ್ಟು ಎಂದು ಹೇಳುತ್ತಾರೆ. ಆದರೆ ಈ ಗಣತಿಯಲ್ಲಿ ''ಹಿಂದಿ ತಿಳಿದಿದೆಯೇ?'' ಎಂದು ಕೇಳಲಾಗಿದೆಯೇ ಹೊರತು ''ಹಿಂದಿ ಮಾತೃಭಾಷೆಯೇ ಅಥವಾ ಮಾತನಾಡಬಲ್ಲರೇ?'' ಎಂಬುದನ್ನು ಗಮನಿಸಿಲ್ಲ. ಅಷ್ಟೇ ಅಲ್ಲದೆ ಪ್ರತ್ಯೇಕ ನುಡಿಗಳಾದ ಡೋಗ್ರಿ, ಭೋಜಪುರಿ, ಮೈಥಿಲಿ, ಮಗಹಿ, ಅವಧಿ, ಹರ್ಯಾಣ್ವಿ, ಛತ್ತೀಸ್‌ಗಢಿ, ಬ್ರಜ್, ಬುಂದೇಲಿ, ಗಢ್‌ವಾಲಿ, ಕುಮಾವುನಿ ಇತ್ಯಾದಿಗಳನ್ನು ಹಿಂದಿಯ ಅಡಿಯಲ್ಲಿ ತರಲಾಗಿದೆ. ಅಷ್ಟೇ ಯಾಕೆ, ರಾಜಸ್ತಾನಿ, ಪಂಜಾಬಿ, ಗುಜರಾತಿ, ಕಾಶ್ಮೀರಿ ನುಡಿಗಳನ್ನೂ ಹಿಂದಿ ಆಪೋಷನ ತೆಗೆದುಕೊಳ್ಳುತ್ತಿದೆ.

ಹಿಂದಿ ಹೇರಿಕೆಯ ಈ ಕಪಟ ರಾಜಕಾರಣವನ್ನು ಕರ್ನಾಟಕದ ಜನರು ಖಂಡಿಸಬೇಕು. ತ್ರಿಭಾಷಾ ಸೂತ್ರದ ಹೆಸರಿನಲ್ಲಿ ನಮ್ಮ ಮಕ್ಕಳ ಮೇಲೆ ಹಿಂದಿ ಭಾರ ಹೇರಲು ಬಂದವರನ್ನು ತಿರಸ್ಕರಿಸಿ. ನಮ್ಮ ಭಾಷೆ, ನಮ್ಮ ಸಂಸ್ಕೃತಿ, ನಮ್ಮ ಗೌರವವನ್ನು ರಕ್ಷಿಸಲು ಇದು ಸಮಯ. ಹಿಂದಿ-ಹಿಂದೂ-ಹಿಂದೂಸ್ಥಾನ್‌ನ ಹುನ್ನಾರಕ್ಕೆ ದೇಶ ಬಲಿಯಾಗಬಾರದು. ಕನ್ನಡವೇ ನಮ್ಮ ಅಸ್ತಿತ್ವ, ಕನ್ನಡವೇ ನಮ್ಮ ಹೆಮ್ಮೆ. ಯಾರು ನಮ್ಮ ಭಾಷೆಯನ್ನು ಕೊಲ್ಲಲು ಬಂದರೂ ಪ್ರತಿರೋಧಿಸುವುದು ನಮ್ಮ ಹಕ್ಕು. ಕರ್ನಾಟಕ ಎಚ್ಚರಗೊಳ್ಳುತ್ತಿದೆ. ಅದಂತೂ ಸ್ಪಷ್ಟವಾಗಿ ಕಾಣಿಸುತ್ತಿದೆ.

ಬೌದ್ಧ ಗುರು ಥಿಚ್ ನಾಥ್ ಹಾನ್ ಮತ್ತು ಅಮೆರಿಕನ್ ಯೋಧ

ಆಳುತ್ತಿರುವ ನಾಯಕರು ಹಿರಿಯರೇ ಆದರೂ ಅವರು ತೆಗೆದುಕೊಳ್ಳುತ್ತಿರುವ ನಿರ್ಣಯಗಳು ಭಯ ಹುಟ್ಟಿಸುವಂತಿವೆ. ಒಂದಿಡೀ ಪೀಳಿಗೆಯನ್ನು ಮತ, ಪಂಥ, ಸಿದ್ಧಾಂತ, ರಾಷ್ಟ್ರದ ಹೆಸರಲ್ಲಿ ಉದ್ವೇಗಕ್ಕೆ ದೂಡಿ ಮಾನವೀಯತೆಯನ್ನೇ ಮರೆಯುವಂತೆ ಮಾಡಿದ್ದಾರೆ. ಮನುಷ್ಯ ಕುಲಕ್ಕೆ ಥಿಚ್‌ರಂತಹ ಸಮಚಿತ್ತದ ಮನೋಮಗ್ನ ಹೀಲರ್ ಬೇಕಾಗಿದ್ದಾರೆ ಅಲ್ಲ.

ಬೌದ್ಧ ಗುರು ಥಿಚ್ ನಾಥ್ ಹಾನ್ ವಿಯೆಟ್ನಾಂ ಯುದ್ಧದಲ್ಲಿ ಹೋರಾಡಿದ ಅಮೆರಿಕನ್ ಸೈನಿಕನನ್ನು ತಮ್ಮ ಶಿಬಿರದಲ್ಲೊಮ್ಮೆ ಭೇಟಿಯಾಗುತ್ತಾರೆ. ಯುದ್ಧದ ಭೀಭತ್ಸತೆ ಅನುಭವಿಸಿದ್ದ ಯೋಧ ಅವ. ಒಂದು ದಿನ ವಿಯೆಟ್ನಾಂ ಕಾಡುಗಳಲ್ಲಿ ಅವನ ಪಡೆ ದಾಳಿಗೊಳಗಾಗುತ್ತದೆ. ಏಕಾಏಕಿ ಬಂದೆರಗಿದ ವೈರಿ ಸೇನೆ, ಗಸ್ತು ಹೊಡೆಯುತ್ತಿದ್ದ ಪಡೆಯಲ್ಲಿದ್ದ ಆತನ ಆಪ್ತ ಮಿತ್ರರನ್ನು ಕೊಂದು ಬಿಡುತ್ತದೆ. ಆತ ಮತ್ತು ಕೆಲ ಯೋಧರು ಮಾತ್ರ ಬದುಕುಳಿಯುತ್ತಾರೆ. ಸುಡುವ ಸೇಡಿನ ಕಿಚ್ಚನ್ನು ನಂದಿಸಲು ಯೋಧ ವಿಕೃತ ಪಿತೂರಿಯೊಂದನ್ನು ಮಾಡುತ್ತಾನೆ. ರುಚಿಕರ ಮಾಂಸಾಹಾರ, ಸ್ಯಾಂಡ್ವಿಚ್ ಮಾಡಿ ಅದರೊಳಗೆ ವಿಷ ಬೆರೆಸುತ್ತಾನೆ. ಆ ವಿಷ ಮಿಶ್ರಿತ ಆಹಾರವನ್ನು ವಿಯೆಟ್ನಾಂ ಹಳ್ಳಿಯ ಬಳಿ ಬಿಡುತ್ತಾನೆ.

ಹಾಗೆ ಮಾಡಿದ ಆತ ದೂರದಲ್ಲಿ ಅವಿತು ಕುಳಿತು ಕುತೂಹಲದಿಂದ ಗಮನಿಸುತ್ತಾನೆ. ಹಳ್ಳಿಗೆ ಮರಳುತ್ತಿದ್ದ ಮುಗ್ಧ ಮಕ್ಕಳು ಯಾವುದೇ ಸಂಶಯ ಪಡದೆ ರುಚಿಯಾದ ಆಹಾರವನ್ನು ತಿನ್ನುತ್ತಾರೆ. ಕೆಲವೇ ಕ್ಷಣಗಳಲ್ಲಿ ಮಕ್ಕಳು ಅತೀವ ವೇದನೆಯಲ್ಲಿ ನೆರಳುತ್ತಾರೆ, ಮನಕಲುಕುವಂತೆ ಅಳುತ್ತಾರೆ. ಗಾಬರಿಗೊಂಡ ಪೋಷಕರು ಮಕ್ಕಳ ಬಳಿ ಬರುತ್ತಾರೆ. ಆಂಬುಲೆನ್ಸ್ ಕರೆಸಲು ಪ್ರಯತ್ನಿಸುತ್ತಾರೆ. ರಸ್ತೆಗಳೇ ಇರದ ಆ ದಟ್ಟ ಕಾನನದಲ್ಲಿದ್ದ ಹಳ್ಳಿಗೆ ತ್ವರಿತ ಗತಿಯಲ್ಲಿ ಆಂಬುಲೆನ್ಸ್ ಬರಬಹುದೇ? ಅಂತಹ ದುರ್ಗಮ ಹಾದಿ ಸವೆಸಿ ಆಂಬುಲೆನ್ಸ್ ಸಮಯಕ್ಕೆ ಸರಿಯಾಗಿ ಬರಲಾರದು ಎಂದು ಅರಿತಿದ್ದ ಯೋಧ ಈ ಕುಕೃತ್ಯಕ್ಕೆ ಮುಂದಾಗಿದ್ದ! ವಿಲವಿಲ ಒದ್ದಾಡಿದ ಐವರು ತಮ್ಮ ಪೋಷಕರ ಮಡಿಲಲ್ಲಿ ಪ್ರಾಣಬಿಡುತ್ತಾರೆ.

ಅಮೆರಿಕಾಕ್ಕೆ ಮರಳಿದ ಆ ಯೋಧ ಮತ್ತೆಂದೂ ನೆಮ್ಮದಿಯ ಜೀವನ ನಡೆಸಲಾಗಲಿಲ್ಲ. ಆತನ ಬದುಕಿನಿಂದ ಸುಖ ನಿದ್ದೆ ಮಾಯವಾಯಿತು. ತನ್ನ ಮಕ್ಕಳೊಡನೆ ಸಮಯ ಕಳೆಯುವುದೇ ಅವನಿಗೆ ಅಸಾಧ್ಯವಾಯಿತು. ಆತ ಅವರಿಂದ ದೂರವೇ ಇರುತ್ತಿದ್ದ. ತಾನು ಎಸಗಿದ ದುಷ್ಕೃತ್ಯವನ್ನು ಯಾರಿಗೂ ಹೇಳಿಕೊಳ್ಳಲಾಗಲಿಲ್ಲ. ಒಮ್ಮೆ ತಾಯಿಯ ಬಳಿ ಎಲ್ಲಾ ಹೇಳಿಕೊಂಡಾಗ ಆಕೆಗೂ ಅದನ್ನು ಅರಗಿಸಿಕೊಳ್ಳಲಾಗಲಿಲ್ಲ. ''ಯುದ್ಧದ ಭೀಕರತೆಯೇ ಹಾಗೆ. ಇಂತಹ ಘಟನೆಗಳು ನಡೆದು ಹೋಗುತ್ತವೆ. ಈ ಪರಿ ನಿನ್ನನ್ನು ನೀನು ಶಿಕ್ಷಿಸಿಕೊಳ್ಳಬೇಡ'' ಎಂದೇಳಿ ಸುಮ್ಮನಾದಳು ತಾಯಿ. ಐವರು ಮುಗ್ಧರನ್ನು ಕೊಂದ ಯೋಧ ತನ್ನನ್ನು ತಾನು ಕ್ಷಮಿಸಿಕೊಳ್ಳಲಾಗಲಿಲ್ಲ.

ಥಿಚ್ ನಾಥ್ ಹಾನ್

ಹಲವು ವರುಷಗಳ ನಂತರ ವಿಯೆಟ್ನಾಂ ಯೋಧರಿಗೆ ಥಿಚ್ ಶಿಬಿರವೊಂದನ್ನು ಆಯೋಜಿಸಿದ್ದರು. ಸೈಕೋಥೆರಪಿಸ್ಟ್‌ಗಳ ಸಲಹೆ ಮೇರೆಗೆ ಯೋಧರು ಆ ಶಿಬಿರದಲ್ಲಿ ಭಾಗವಹಿಸಿದ್ದರು. ಐವರನ್ನು ಕೊಂದ ಯೋಧ ಕೂಡ ಶಿಬಿರದ ಭಾಗವಾಗಿದ್ದ. ಅಲ್ಲಿ ತನ್ನ ಅಳಲನ್ನು ತೋಡಿಕೊಂಡಿದ್ದ. ಶಿಬಿರದಲ್ಲೂ ಆತ ಭೀತಿಯಿಂದಲೇ ನಡೆದಾಡುತ್ತಿದ್ದ. ಶಿಬಿರದಲ್ಲೂ ದಾಳಿಗೊಳಗಾಗಬಹುದೆಂಬ ಭಯ ಅವನಿಗೆ. ವಿಯೆಟ್ನಾಂ ಬೌದ್ಧ ಗುರು ನಡೆಸುತ್ತಿದ್ದ ಶಿಬಿರದಲ್ಲಿ ಅಮೆರಿಕನ್ ಯೋಧ ನೆಮ್ಮದಿಯಾಗಿರುವುದಾದರು ಹೇಗೆ? ಆತ ಥಿಚ್ ಅವರನ್ನು ಅನುಮಾನದಿಂದಲೇ ಕಂಡಿದ್ದ.

ಥಿಚ್ ಹೇಳಿಕೊಡುವ ನಡಿಗೆ ಧ್ಯಾನದ ( ) ವೇಳೆಯಲ್ಲೂ ಆತ ಗುಂಪಿನಿಂದ ಬಲು ಹಿಂದುಳಿಯುತ್ತಿದ್ದ. ಯಾರಾದರೂ ದಾಳಿ ಮಾಡಿದರೆ ಪ್ರಾಣ ಉಳಿಸಿಕೊಳ್ಳಲು ಸಾಕಷ್ಟು ಸಮಯ ಸಿಗುತ್ತದೆ ಎಂಬ ಲೆಕ್ಕಾಚಾರ ಅವನದು. ಮತ್ತೊಬ್ಬ ಯೋಧನಿದ್ದ ಶಿಬಿರದ ಡಾರ್ಮಿಟರಿಯಲ್ಲಿ ಮಲಗುತ್ತಿರಲಿಲ್ಲ. ದೂರದಲ್ಲಿ ಒಂದು ಟೆಂಟ್ ಹಾಕಿ ತನ್ನನ್ನ ತಾನು ರಕ್ಷಿಸಿಕೊಳ್ಳಲು ಟೆಂಟ್ ಸುತ್ತಲೂ ಬಲೆ ಮತ್ತಲವು ಟ್ರ್ಯಾಪ್ ಹರಡಿದ್ದ! ಎಷ್ಟೋ ಯೋಧರೊಂದಿಗೆ ಮಾತು ಕೂಡ ಆಡುತ್ತಿರಲಿಲ್ಲ.

ಆಹಾರದಲ್ಲಿ ವಿಷ ಬೆರೆಸಿ ಮಕ್ಕಳನ್ನು ಕೊಂದ ಯೋಧನನ್ನು ಥಿಚ್ ಮಾತನಾಡಿಸಿ ಕೋಣೆಗೆ ಬರುವಂತೆ ತಿಳಿಸಿದರು. ಅಲ್ಲಿ ನಡೆದ ಸಂವಾದದ ವೇಳೆ ''ಹೌದು ನೀನು ವಿಯೆಟ್ನಾಂನಲ್ಲಿ ಐವರು ಮುಗ್ಧರನ್ನು ಕೊಂದೆ ನಿಜ, ಆದರೆ ಇಂದು ಎಷ್ಟೋ ಮಕ್ಕಳ ಜೀವ ಉಳಿಸುವ ಕಾರ್ಯವನ್ನು ನೀ ಮಾಡಬಹುದೆಂಬುದು ನಿಜ ಅಲ್ಲವೇ'' ಎಂದು ಥಿಚ್ ಕೇಳಿದರು.

ಪ್ರಪಂಚಾದ್ಯಂತ ಎಲ್ಲೆಡೆ ಹಿಂಸೆ, ಬಡತನ, ದಬ್ಬಾಳಿಕೆ, ಕದನಗಳಿಗೆ ಮಕ್ಕಳು ಪ್ರಾಣ ಬಿಡುತ್ತಿದ್ದಾರೆ. ಸಮಯಕ್ಕೆ ಸರಿಯಾಗಿ ಸಿಗುವ ಆಹಾರ, ಔಷಧಿ, ಬೆಚ್ಚನೆಯ ಬಟ್ಟೆ, ಕುಡಿಯುವ ನೀರು ಕೂಡ ಸಾವಿರಾರು ಮಕ್ಕಳ ಪ್ರಾಣ ಉಳಿಸುತ್ತೆ. ''ನೀನೇಕೆ ಈ ಮಕ್ಕಳ ಪ್ರಾಣ ಉಳಿಸುವ ಕಾರ್ಯಕ್ಕೆ ಮುಂದಾಗಬಾರದು. ಹೌದು ನೀನು ಐವರ ಕೊಲೆ ಮಾಡಿದ್ದಿ. ಆದರೆ ನಿನಗೀಗ ಐವತ್ತು ಮಕ್ಕಳನ್ನು ಉಳಿಸುವ ಸಾಮರ್ಥ್ಯ, ಅವಕಾಶವೂ ಇದೆ. ಈ ಗಳಿಗೆಯಲ್ಲಿ ಗತದಿಂದ ಬಿಡುಗಡೆಗೊಳ್ಳಬಹುದು. , '' ಎಂದರು ಥಿಚ್.

ಮನೋಮಗ್ನತೆ ಎಂಬುದು ಮಾಂತ್ರಿಕ ಮುಲಾಮು. ಅದೊಂದು ಸದೃಢ ಹಾಯಿ ದೋಣಿ. ಮನೋಮಗ್ನತೆಯನ್ನು ಆಚರಿಸುವವರು ಬದುಕೆಂಬ ರಭಸದ ನದಿಯಲ್ಲಿ ಸದಾ ಈ ಸುರಕ್ಷಿತ ದೋಣಿಯಲ್ಲಿರುತ್ತಾರೆ. ಮನೋಮಗ್ನರು ವೇದನೆಯ ನದಿಯಲ್ಲಿ ಮುಳುಗಲಾರರು.

ಥಿಚ್ ಅವರ ಮಾತುಗಳು ಯೋಧನ ಮನ ನಾಟಿತು. ಆತ ಮಕ್ಕಳ ಸಹಾಯಕ್ಕಿಳಿದ. ಗುಣಮುಖನಾದ. ಈ ಗಳಿಗೆಯಲ್ಲಿ ಗತವೂ ಇದೆ. ಈ ಗಳಿಗೆಯಲ್ಲಿ ಆಳವಾಗಿ ಬದುಕಿದರೆ ಗತವನ್ನು ಗುಣಪಡಿಸಬಹುದು. ಯಾವುದಕ್ಕೂ ಕಾಯುವ ಅವಶ್ಯಕತೆಯಿಲ್ಲ ಎಂದು ಥಿಚ್ ತಿಳಿಸಿದರು.

ಸಂತಾನೋತ್ಪತ್ತಿಯ ಕಾಲ ಮುಗಿದ ನಂತರವೂ ಮನುಷ್ಯ ಇಷ್ಟು ಸುದೀರ್ಘ ಕಾಲವೇಕೆ ಬದುಕುತ್ತಾನೆ ಎಂಬ ಪ್ರಶ್ನೆ ವಿಕಸನ ಜೀವಶಾಸ್ತ್ರಜ್ಞರನ್ನು ಬಹುವರುಷ ಕಾಡಿತ್ತಂತೆ. ಮನುಷ್ಯನ ಹತ್ತಿರದ ಸಂಬಂಧಿಗಳೆಂದೇ ಗುರುತಿಸಲ್ಪಡುವ ಚಿಂಪಾಂಜಿ, ಗೊರಿಲ್ಲಾಗಳು ಮೂವತ್ತು ನಲವತ್ತು ವರುಷ ಬದುಕುತ್ತವೆ. ಆದರೆ ನಾವು ಎಪ್ಪತ್ತು ಎಂಬತ್ತು ವರುಷ ಬದುಕುತ್ತೇವೇಕೆ? ಉತ್ತರ ಬಲು ಸರಳವಾಗಿತ್ತು. ಮನುಷ್ಯ ಬದುಕುಳಿಯುವುದಕ್ಕೆ ವಿವೇಕ, ಜ್ಞಾನದ ಅವಶ್ಯಕತೆಯಿತ್ತು. ಸಿಹಿನೀರಿನ ಬಾವಿಗಳ, ಋತುಗಳ, ಹಿಡಿಯಬೇಕಾದ ಜಾಡಿನ, ಪಸಲಿನ, ಮರದ, ಕ್ರೂರಮೃಗಗಳ, ಸತ್ವಯುತ ಫಲಗಳ ಕುರಿತಾದ ಜ್ಞಾನವನ್ನು ಮಾಹಿತಿಯನ್ನು ಹಿರಿಯರೇ ಯುವ ಜನತೆಗೆ ಧಾರೆ ಎರೆಯಬೇಕಿತ್ತು. ಹಿರಿಯರ ಉಳಿವು ಮನುಷ್ಯಕುಲದ ಉಳಿವಾಗಿತ್ತು. . ಇದನ್ನೇ ವಿಕಸನ ಜೀವಶಾಸ್ತ್ರಜ್ಞರು ಎಂದು ಹೆಸರಿಸಿದರು.

ಮನುಷ್ಯರ ವಿಕಸನದಲ್ಲಿ ಹಿರಿಯರು ವಹಿಸಿದ ಪಾತ್ರ ಮಹತ್ವವಾದದ್ದು. ಆದರಿಂದು ಹಿರಿಯರು ಮಾಡುತ್ತಿರುವ ಅವಾಂತರ ನೋಡುತ್ತಿದ್ದರೆ ಬಹುಶಃ ಮನುಷ್ಯಕುಲದ ಅವನತಿಗೂ ಹಿರಿಯರೇ ಕಾರಣವಾಗಲಿದ್ದಾರೆ ಎಂದು ಅನಿಸತೊಡಗಿದೆ. ಎಲ್ಲಾ ದೇಶಗಳನ್ನೂ ಆಳುತ್ತಿರುವ ನಾಯಕರು ಹಿರಿಯರೇ ಆದರೂ ಅವರು ತೆಗೆದುಕೊಳ್ಳುತ್ತಿರುವ ನಿರ್ಣಯಗಳು ಭಯ ಹುಟ್ಟಿಸುವಂತಿವೆ. ಒಂದಿಡೀ ಪೀಳಿಗೆಯನ್ನು ಮತ, ಪಂಥ, ಸಿದ್ಧಾಂತ, ರಾಷ್ಟ್ರದ ಹೆಸರಲ್ಲಿ ಉದ್ವೇಗಕ್ಕೆ ದೂಡಿ ಮಾನವೀಯತೆಯನ್ನೇ ಮರೆಯುವಂತೆ ಮಾಡಿದ್ದಾರೆ. ಮನುಷ್ಯ ಕುಲಕ್ಕೆ ಥಿಚ್‌ರಂತಹ ಸಮಚಿತ್ತದ ಮನೋಮಗ್ನ ಹೀಲರ್ ಬೇಕಾಗಿದ್ದಾರೆ ಅಲ್ಲ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR